**(A Ready Reckoner for Planning Team Members is provided by Government of India)**

**ಯೋಜನಾ ತಂಡದ ಸದಸ್ಯರಿಗೆ ಸಿದ್ಧ ಮಾಹಿತಿ ಕೈಪಿಡಿ:–**

# ತೀವ್ರತರ ಸಹಭಾಗಿತ್ವ ಯೋಜನಾ ತಯಾರಿಕೆ–2(IPPE-2)
# ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ


| ಕ್ರಮ ಸಂಖ್ಯೆ | ವಿವರ | ಪುಟಸಂಖ್ಯೆ |
|---|---|---|
| 1 | ಪರಿಚಯ | 1 |
| 2 | ಯೋಜನೆಯ ಪರಿಕರಗಳು | 3 |
| 3 | ಪೂರ್ವ ಯೋಜನೆಯ ಮಧ್ಯಸ್ತಿಕೆಗಳು | 3 |
| 4 | ಗ್ರಾಮದಲ್ಲಿ ಯೋಜನಾ ವಿಧಾನ | 6 |
| 5 | ಗ್ರಾಮದಲ್ಲಿ ಯೋಜನೆ ಸುಗಮಗೊಳಿಸುವ ವಿಧಾನ | 7 |
| 6 | ಯೋಜನೆ ತಯಾರಿ ನಂತರ ಗ್ರಾಮಸಭೆ ಅನುಮೋದನೆ | 15 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಇಲಾಖೆಯ ವಿವಿಧಕಾರ್ಯಕ್ರಮಗಳನ್ನು ಅರ್ಥೈಸಿಕೊಳ್ಳುವ ಬಗ್ಗೆ. | 17 |
| 8 | ಮಹಾತ್ಮಗಾಂಧಿ ಗ್ರಾಮೀಣಉದ್ಯೋಗಖಾತರಿ ಯೋಜನಯಡಿ ಅವಕಾಶವಿರುವ ರಚನೆಗಳು/ಕಾಮಗಾರಿಗಳ ವಿವರ ಗಳು. | 17 |


**1. ಪರಿಚಯ:**

ಗ್ರಾಮೀಣಾಭಿವೃದ್ಧಿ ಮಂತ್ರಾಲಯವು (MoRD) ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಡಿ 2,500 ಹಿಂದುಳಿದ ಬ್ಲಾಕ್‌ಗಳಲ್ಲಿ ತೀವ್ರತರ ಯೋಜನಾ ತಯಾರಿಯನ್ನು (IPPE) ಕೈಗೊಳ್ಳಲಾಗಿದೆ. ಈ ವರ್ಷ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಈ ಭಾಗವಹಿಸುವಿಕೆಯನ್ನು ಇನ್ನಷ್ಟು ಬಲಪಡಿಸಲು ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಒಗ್ಗೂಡಿಸಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ರಾಷ್ಟ್ರೀಯಗ್ರಾಮೀಣ ಜೀವನೋಪಾಯ ಅಭಿಯಾನ (NRLM), ದೀನದಯಾಳು ಉಪಾಧ್ಯಾಯ–ಗ್ರಾಮೀಣ ಕೌಶಲ್ಯ ಯೋಜನೆ (DDU-GKY), ರಾಷ್ಟ್ರೀಯಸಾಮಾಜಿಕ ಭದ್ರತಾನೆರವು ಕಾರ್ಯಕ್ರಮ (NSAP) ಮತ್ತು ಇಂದಿರಾ ಆವಾಸ್‌ಯೋಜನೆ (IAY) ಗಳನ್ನು ಒಗ್ಗೂಡಿಸಲಾಗಿದೆ.

ಈ ಯೋಜನೆಗಳನ್ನು ಒಗ್ಗೂಡಿಸುವಿಕೆಯ ಮುಖ್ಯ ಉದ್ದೇಶವು ಸಮುದಾಯ ಅಂದರೆ ವಿಶೇಷವಾಗಿ ಮಹಿಳೆಯರು ಮತ್ತು ದುರ್ಬಲ ಕುಟುಂಬಗಳ ಭಾಗವಹಿಸುವಿಕೆ ಹಾಗೂ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಲ ಪಡಿಸಲು ಮತ್ತು ಗ್ರಾಮಸಭೆಯ ಆದ್ಯತಾ ಕಾಮಗಾರಿಗಳ ಪಟ್ಟಿ ಅನುಮೋದನೆ ಪಡೆಯುವುದು.

ಮಂತ್ರಾಲಯವು ಯೋಜನಾ ಕಾರ್ಯ ಅಂತಿಮಗೊಳಿಸುವ ಮುನ್ನ ರಾಜ್ಯದ ಗ್ರಾಮೀಣಾಭಿವೃದ್ಧಿ ಯೋಜನೆಯನ್ನು ಈ ಕೆಳಕಂಡ ಅಂಶಗಳನ್ನು ಗುರಿಯಾಗಿಟ್ಟುಕೊಂಡಿದೆ.

- ಪ್ರಥಮವಾಗಿ ಗ್ರಾಮದ ಪ್ರಕೃತಿ ಸಂಪನ್ಮೂಲದ ಮೇಲೆ ಒಂದುಸಮಗ್ರ ಮತ್ತು ಜೀವನೋಪಾಯದ ಮೇಲೆ ಅವಲಂಬಿಸಿರಬೇಕು.
- ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರ ಆಯವ್ಯಯವು ದುರ್ಬಲ ವರ್ಗಗಳ ಬೇಡಿಕೆಗೆ ಅನುಗುಣವಾಗಿರಬೇಕು.
- DDU-GKYರ ಅಡಿ ಕೂಲಿ ಕಾರ್ಮಿಕರಲ್ಲಿ ಅರ್ಹರಾದವರನ್ನು ಕೌಶಲ್ಯಕ್ಕೆ ಕೋರಿಕೆ ಪಡೆಯುವುದು.

- ರಾಷ್ಟ್ರೀಯ ಜೀವನೋಪಾಯ ಅಡಿ ದುರ್ಬಲದ ವರ್ಗದ ಕುಟುಂಬಗಳಿಗೆ ಕುಟುಂಬ ಆಧಾರಿತ ಜೀವನೋಪಾಯ ಯೋಜನೆ ತಯಾರಿಸುವುದು. ಇದಕ್ಕೆ SECC ದತ್ತಾಂಶಗಳನ್ನು ಬಳಸಿಕೊಂಡು ದುರ್ಬಲ ವರ್ಗದ ಕುಟುಂಬಗಳನ್ನು ಗುರ್ತಿಸತಕ್ಕದ್ದು.
- ರಾಷ್ಟ್ರೀಯ ಸಾಮಾಜಿಕ ಭದ್ರತಾ ನೆರವು (NSAP) ಮತ್ತು ಇಂದಿರಾ ಆವಾಸ್ ಯೋಜನೆ (IAY)ಗಳಲ್ಲಿ ಬಿಟ್ಟು ಹೋದ ಫಲಾನುಭವಿಗಳ ಪಟ್ಟಿ ತಯಾರಿಸುವುದು.

ಹ್ಯಾಮ್ಲೆಟ್ /ಗ್ರಾಮದಲ್ಲಿ(ಕುಟುಂಬಗಳ ಗಾತ್ರ ಕನಿಷ್ಠ 100)–IPPE-II ಯೋಜನೆ ತಯಾರಿಸಲು ಗ್ರಾಮ್ ರೋಜಗಾರ್ ಸಹಾ ಯಕ್ ಮತ್ತು ವಾರ್ಡ್‌ಸದಸ್ಯರ ನೆರವಿನಲ್ಲಿ 3 ಸದಸ್ಯರ ಬ್ಲಾಕ್ ಪ್ಲಾನಿಂಗ್ ತಂಡವನ್ನು ರಚಿಸಿ, 3 ದಿನಗಳ ಯೋಜನೆ ತಯಾರಿ ಮಾಡುವುದು. NRLM Intensive Block ಗಳಲ್ಲಿ ಈ ಪ್ರಕ್ರಿಯೆಯನ್ನು ನಾಲ್ಕು ದಿನಗಳ ಕಾಲ ನಡೆಸುವುದು.

BPTಸದಸ್ಯರು ಅವರ ಜವಾಬ್ದಾರಿಯನ್ನು ನಿರ್ವಹಿಸಲು ಅವರ ಬೆಂಬಲಕ್ಕಾಗಿ ಈ ಕೈಪಿಡಿ ತಯಾರಿಸಿದೆ. ಈ ಕೈಪಿಡಿ ಯನ್ನು 5 ಭಾಗಗಳನ್ನಾಗಿ ವಿಭಜಿಸಲಾಗಿದೆ. ಮೊದಲಭಾಗದಲ್ಲಿ BPTಸದಸ್ಯರಿಗೆ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಿಟ್‌ನ ಸಾಮಗ್ರಿಗಳ ಪಟ್ಟಿನೀಡಲಾಗಿದೆ. ಎರಡನೇಭಾಗದಲ್ಲಿ ಯೋಜನಾ ಪ್ರಕ್ರಿಯೆಗೆ ನಡೆಯುವ ಕಾರ್ಯಗಳ ವಿವರ ನೀಡಿದೆ. BPTಸದಸ್ಯರು ಯೋಜನೆ ಕಾರ್ಯಗತಗೊಳಿಸುವಾಗ ಬರುವ ಪ್ರಶ್ನೆಗಳಾದ ಈ ಯೋಜನೆಯ ಉದ್ದೇಶ ಮತ್ತು ಇತರ ಅಂಶಗಳ ವಿವರ ನೀಡಲಾಗಿದೆ. ಮೂರನೇಭಾಗದಲ್ಲಿ ನಮೂನೆಗಳ ಮಾದರಿ ನೀಡಿ ಅವುಗಳಲ್ಲಿ ಯೋಜನಾ ಕಾರ್ಯದ ವಿವರ ಭರ್ತಿಮಾಡಲು ಸೂಚಿಸಿದೆ. ನಾಲ್ಕನೇ ಮತ್ತು ಕೊನೆಯಭಾಗದಲ್ಲಿ ಮೂಲಮಾಹಿತಿ/ವಿವರ BPT ಸದಸ್ಯರು ಒಗ್ಗೂಡಿಸಿದೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಗಳ ಚೆನ್ನಾಗಿ ತಿಳಿದುಕೊಂಡಿದ್ದರೆ ಕಾರ್ಯ ನಿರ್ವಹಿಸಲು ಸುಲಭವಾಗುವುದು.

**ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳು:**

1. ಗ್ರಾಮದಲ್ಲಿ GRS ಹಾಗೂ ವಾರ್ಡ್‌ಸದಸ್ಯರು ಯೋಜನಾಕಾರ್ಯ ತಯಾರಿಸುವಾಗ BPT ಸದಸ್ಯರಿಗೆ ಯಾವುದಾದ ರೂ ಗೊಂದಲವುಂಟಾದಲ್ಲಿ ಅವರಿಗೆ ರಕ್ಷಣೆ ನೀಡಲು ಎಚ್ಚರ ವಹಿಸಬೇಕು.
2. GRS ಹಾಗೂ ವಾರ್ಡ್‌ಸದಸ್ಯರು ಯೋಜನಾ ಕಾರ್ಯಗಳಲ್ಲಿ ಸಹಕರಿಸಬೇಕು, ಆದರೆ ಯಾವುದೇ ಕಾರಣದಿಂದಲೂ BRT ಸದಸ್ಯರ ಜವಾಬ್ದಾರಿ ತೆಗೆದುಕೊಳ್ಳಬಾರದು.
3. ಸಂಗ್ರಹಿಸಿದ ಮಾಹಿತಿಯನ್ನು ಪುನಃ ಪರಿಶೀಲಿಸಲು/ಗಮನಿಸುವ ಅಗತ್ಯವಿಲ್ಲ.
4. BPT ಸದಸ್ಯರು ಯೋಜನೆ ಪೂರ್ಣಗೊಳಿಸುವುದಾಗಿ ಯಾವುದೇ ಭರವಸೆ/ಬದ್ಧತೆ ನೀಡಬಾರದು.
5. ಸಂಗ್ರಹಿಸಿದ ಮಾಹಿತಿಯನ್ನು ಈ ಯೋಜನೆ ಕಾರ್ಯದಲ್ಲಿ ಭಾಗವಹಿಸುವ ವಿವಿಧ ಇಲಾಖೆಗಳಿಗೆ ನೀಡಬಹುದು. ಅವರು ಸೂಕ್ತ ಕ್ರಮ ಮುಂದುವರೆಸಬೇಕು.
6. ಮೊದಲನೇ ದಿನವೇ ನಮೂನೆ ಭರ್ತಿಮಾಡಲು ಪ್ರಾರಂಭಿಸಬಾರದು ಹಾಗೂ ಜೀವನೋಪಾಯದ ಯೋಜನೆಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕು.
7. NRLM (ರಾಷ್ಟ್ರೀಯಗ್ರಾಮೀಣ ಜೀವನೋಪಾಯ ಅಭಿಯಾನ) ನ ತೀವ್ರತರ ಬ್ಲಾಕ್‌ಗಳಿಗೆ ನಾಲ್ಕುದಿನಗಳ ಕಾರ್ಯ ಹಾಗೂ NRLM ಅಲ್ಲದ ಘಟಕಗಳಿಗೆ ಮೂರು ದಿನಗಳ ಕಾರ್ಯ.
8. ಯೋಜನೆ ತಯಾರಿ ಕಾಲದಲ್ಲಿ BRT ಸದಸ್ಯರು ಗ್ರಾಮಗಳಲ್ಲಿ ವಾಸವಿರುವಂತೆ ತಿಳಿಸಲಾಗಿದೆ.
9. ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆಗಳನ್ನು ದೊಡ್ಡ ಬ್ರೌನ್ ಪೇಪರ್‌ನಲ್ಲಿ, ಡ್ರಾಯಿಂಗ್‌ನ ಮೇಲೆ ಮಾಡುವುದಕ್ಕಿಂತ ಉತ್ತಮ. ಏಕೆಂದರೆ ಪ್ರತಿ ತೆಗೆಯಲು ಹೆಚ್ಚಿನ ಸಮಯಬೇಕಾಗುತ್ತದೆ.
10. ವಿಶಿಷ್ಠ ಉದ್ದೇಶಕ್ಕಾಗಿ PRA ಸಾಮಗ್ರಿ ಬಳಸಬೇಕು.

**2. ಯೋಜನೆ ಪರಿಕರಗಳು:–**

ಯೋಜನೆ ಕಾರ್ಯಪ್ರಾರಂಭವಾಗುವ ಮೊದಲು ಯೋಜನಾ ತಂಡದ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ದಾಖಲೆಗಳು /ಸಾಮಗ್ರಿಗಳನ್ನು ಹೊಂದಿರಬೇಕು. ಈ ಬಗ್ಗೆ ಚಾರ್ಜ್‌ಆಫೀಸರ್ ಈ ಸಾಮಗ್ರಿಗಳನ್ನು BRTಸದಸ್ಯರಿಗೆ ಯೋಜನಾ ಪ್ರಕ್ರಿಯೆಗೆ ಮೊದಲೇ ಒದಗಿಸಲಾಗಿದೆಯೇ ಎನ್ನುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

**ಎ. ದಾಖಲೆಗಳು/ಸಾಮಗ್ರಿಗಳು.**

1. ಪ್ರತಿಯೊಂದು ಮನೆಗೂ (HH) ನಮೂನೆಯಲ್ಲಿ ಹೆಸರನ್ನು ಮೊದಲೇ ಭರ್ತಿಮಾಡಬೇಕು.
2. (A, B, C, D ಮತ್ತು E ನಮೂನೆಗಳು) ಬಣ್ಣದ ನಮೂನೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಪ್ರತಿಮಾಡಿಸಬೇಕು.
3. ಸಮುದಾಯ ಮತ್ತು ವೈಯಕ್ತಿಕವಾಗಿ ಆದ್ಯತೆ ಕಾರ್ಯಗಳ ಮಾಹಿತಿ ಸಂಗ್ರಹಿಸಲು ನಮೂನೆ ನೀಡಬೇಕು.
4. ಗ್ರಾಮಪಂಚಾಯತಿಯ ಎಲ್ಲಾ ಜಾಬ್ ಕಾರ್ಡ್‌ದಾರರ ಪಟ್ಟಿ
5. ಹಿಂದೆ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಗೆ ಮಾಡಿದ ಕಾಮಗಾರಿಗಳಪಟ್ಟಿ ಮತ್ತು ಗ್ರಾಮ ಪಂಚಾಯತಿಯ ಈಗಿನ ಕಾಮಗಾರಿಗಳ ಪಟ್ಟಿ
6. ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ನಿರೀಕ್ಷಿಸುತ್ತಿರುವವರ ಪಟ್ಟಿಯೊಂದಿಗೆ
7. ಕುಶಲ ಕಾರ್ಯಕ್ಕಾಗಿ ಗುರುತಿಸಲ್ಪಟ್ಟ ಕುಟುಂಬಗಳ ಪಟ್ಟಿ
8. ಸಾಮಾಜಿಕ ಮತ್ತು ಆರ್ಥಿಕವಾಗಿ ಜಾತಿಗಳ ಜನಗಣತಿ ಅಂಕಿ ಅಂಶ (SECC)
9. ಗ್ರಾಮದ ಕಂದಾಯ ನಕ್ಷೆಯ ಪ್ರತಿ
10. ಹೊಸ ಜಾಬ್ ಕಾರ್ಡ್‌ಗಳ ನೋಂದಣಿಗಾಗಿ ಖಾಲಿ ನಮೂನೆಗಳು

**ಬಿ. ಲೇಖನ ಸಾಮಗ್ರಿಗಳ ಪಟ್ಟಿ:**

| ಸಾಮಗ್ರಿ | ಪ್ರಮಾಣ | ಸಾಮಗ್ರಿ | ಪ್ರಮಾಣ | ಸಾಮಗ್ರಿ | ಪ್ರಮಾಣ |
|---|---|---|---|---|---|
| ಪೆನ್ ಗಳು | 3 | ಸ್ಟಾಂಪ್ ಪ್ಯಾಡ್ | 3 | ಮಾರ್ಕರ್ ಪೆನ್ | 4 |
| ಪೆನ್ಸಿಲ್ ಗಳು | 6 | ಚಾರ್ಟ್ ಪೇಪರ್ | 9 (ಮೂರುಬಣ್ಣ) | ಕತ್ತರಿ | 2 |
| ಇರೇಸರ್ ಮತ್ತು ಕಟರ್ | 3 | ಬ್ರೌನ್ ಪೇಪರ್ | 4 | ಗ್ಲೂ ಸ್ಟಿಕ್ | 2 |
| ಸ್ಟಾಪಲರ್ ಪಿನ್ ಸಮೇತ | 3 | ಸ್ಕೆಚ್ ಪೆನ್ | 1 ಪಾಕೆಟ್ | ಬಿಂದಿ ಪಟ್ಟಿಗಳು | 3(ಮೂರು ಬಣ್ಣ) |

1. **ಪೂರ್ವ ಯೋಜನೆಗೆ ಮಧ್ಯಸ್ಥಿಕೆಗಳು:**
2. **2.1** ಗ್ರಾಮಪಂಚಾಯತಿ ಮಟ್ಟದ ಸಭೆ

**ಯಾವಾಗ?**

ಬ್ಲಾಕ್ ಮಟ್ಟದ ವರ್ಕ್‌ಶಾಪ್ ನಡೆದ ಕೂಡಲೆ

**ಏಕೆ?**

ಹ್ಯಾಮ್ಲೆಟ್/ಗ್ರಾಮಗಳಲ್ಲಿ ಯೋಜನಾಕಾರ್ಯ ಪ್ರಾರಂಭಿಸಲು ಗ್ರಾಮ ಪಂಚಾಯತಿಯ ಪ್ರತಿನಿಧಿಗಳು, CBO ಪ್ರತಿನಿಧಿ ಗಳು (SHG/ಗ್ರಾಮ ಸಂಘಟನೆಗಳು/ಫೆಡರೇಷನ್) ಯೋಜನಾತಂಡದ ಸದಸ್ಯರು ಇವರುಗಳ ನಡುವೆ ಸಮನ್ವಯ ಏರ್ಪಡಿಸುವುದು.

**ಹೇಗೆ?**

ಗ್ರಾಮಪಂಚಾಯತಿಯ ಪ್ರತಿನಿಧಿಗಳು ಮತ್ತು CBO ಪ್ರತಿನಿಧಿಗಳ ನಡುವೆ ಭೇಟಿಮಾಡಿಸಿ ಮುಂಚಿತವಾಗಿ ಗ್ರಾಮಸಭೆ ಏರ್ಪಡಿಸಲು ಹೇಳುವುದು (ಸಭೆಗೆ 1–2 ದಿನ ಮುಂಚಿತವಾಗಿ)

- ಗ್ರಾಮಪಂಚಾಯತಿ ಸಭೆಗೆ ಮುನ್ನ ಗ್ರಾಮೀಣಾಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಿ

  > ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಾದ DDU-GKY, NSAP, IAY ಮತ್ತು NRLM ಗಳನ್ನು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜೊತೆಯಲ್ಲಿ ಒಗ್ಗೂಡಿಸುವಿಕೆ

  > ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮೂಲಕ ಜೀವನೋಪಾಯ ಮತ್ತು ನೈಸರ್ಗಿಕ ಸಂಪನ್ಮೂಲ ವ್ಯವಸ್ಥೆ ಅಭಿವೃದ್ಧಿ ಪಡಿಸುವುದು

  > ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಮೂಲಕ ತೀವ್ರಬಡತನದಲ್ಲಿರುವವರ ಜೀವನೋ ಪಾಯ ಅಭಿವೃದ್ಧಿ ಪಡಿಸುವ ಅವಕಾಶ

  > ಗ್ರಾಮಸ್ಥರು ಯೋಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹೇಗೆ ಪ್ರಚಾರ ಕೈಗೊಳ್ಳಬೇಕು

  > ಕಂದಾಯ ಗ್ರಾಮ/ಗ್ರಾಮಗಳಲ್ಲಿ ಯೋಜನಾ ಪ್ರಕ್ರಿಯೆ ನಡೆಸಲು ದಿನಾಂಕ ನಿಗದಿಪಡಿಸುವುದು

  > BPT ಸದಸ್ಯರು, GRS, SHG ನಾಯಕರು ಕಂದಾಯ ಗ್ರಾಮ/ಗ್ರಾಮ ಹಂತದ ಯೋಜನಾ ಸಮಿತಿಗಳ ಪಾತ್ರ.

**2.2 ಜಾಗೃತಿ ಮೂಡಲು ಮಧ್ಯಸ್ತಿಕೆಗಳು**

**ಯಾವಾಗ:**
ಬ್ಲಾಕ್‌ಹಂತದ ವರ್ಕ್‌ಶಾಪ್ ನಡೆದ ಕೂಡಲೆ ಹಾಗೂ ಗ್ರಾಮ ಯೋಜನಾ ಕಾರ್ಯಆರಂಭಕ್ಕೆ ಮುಂಚಿತವಾಗಿ ನಡೆಸಬೇಕು.

**ಏಕೆ?**
ಕಾರ್ಯಕ್ರಮ ಯಶಸ್ವಿಯಾಗಲು ಗ್ರಾಮಸ್ಥರು ಭಾಗವಹಿಸುವುದು ಬಹಳ ಮುಖ್ಯ.

**ಹೇಗೆ?**

- ಮೊದಲನೆಯದಾಗಿ ಬ್ಲಾಕ್‌ಹಂತದಲ್ಲಿ ಬ್ಲಾಕ್ ಹಂತದ ಅಧಿಕಾರಿ ಸಭೆ ಏರ್ಪಡಿಸಿ, ಈ ಸಭೆಗೆ ಜೀವನೋಪಾಯದ ಅಭಿಯಾನ ಹೊಂದಿರುವ NGOಗಳ ಪ್ರತಿನಿಧಿಗಳು, ಗ್ರಾಮ ಹಂತದ SHG ಪ್ರತಿನಿಧಿಗಳು ಮತ್ತು BPT ಸದಸ್ಯರು ಪಾಲ್ಗೊಳ್ಳಬೇಕು. ಗ್ರಾಮಹಂತದಲ್ಲಿ SHG ಪ್ರತಿನಿಧಿಗಳು, BPT ಸದಸ್ಯರು ಮತ್ತು NGOಗಳ **"ಯೋಜನಾ ಬನೋ ಅಭಿಯಾನ್"** ಕಾರ್ಯಕ್ರಮ ಬೆಂಬಲಿಸುವ ಬಗ್ಗೆ ಚರ್ಚಿಸುವುದು. ಅವರು ಗ್ರಾಮಸ್ಥರನ್ನು "ಭಾಗವಹಿಸುವಕಾರ್ಯ"ದಲ್ಲಿ ಹೇಗೆ ಹುರಿದುಂಬಿಸುವದು. **"ಯೋಜನಾ ಬನೋ ಅಭಿಯಾನ್"** ಕಾರ್ಯಕ್ರಮದ ಬಗ್ಗೆ ರ‍್ಯಾಲಿ, ಬೀದಿನಾಟಕ ಮತ್ತು ಹ್ಯಾಮ್ಲೆಟ್ ಹಂತದಲ್ಲಿ ಸ್ಥಳೀಯ ಸಂತೆ/ಮಾರುಕಟ್ಟೆಗಳಲ್ಲಿ ಗ್ರಾಮಸ್ಥರೊಂದಿಗೆ ಚರ್ಚಿಸಿ ಭಾಗವಹಿಸುವ ಬಗ್ಗೆ ತಿಳುವಳಿಕೆ ಮೂಡಿಸುವುದು.

**ಯಾರು?**

- SHG ಪ್ರತಿನಿಧಿಗಳು, BPT ಸದಸ್ಯರು, NRLM ಪ್ರತಿನಿಧಿಗಳು, CSO ಪ್ರತಿನಿಧಿಗಳು ಮತ್ತು PRI ಸದಸ್ಯರು ಇತ್ಯಾದಿ.

**2.3 ಹ್ಯಾಮ್ಲೆಟ್‌ಹಂತದಲ್ಲಿ ಮಹಾತ್ಮಗಾಂಧಿ ಗ್ರಾಮೀಣಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.**

**ಯಾವಾಗ?**

3 ದಿನಗಳ ಯೋಜನಾ ಕಾರ್ಯಕ್ರಮಕ್ಕೆ ಒಂದುದಿನ ಮುಂಚಿತವಾಗಿ ಕಂದಾಯ ಗ್ರಾಮದಲ್ಲಿ ಪ್ರಾರಂಭಿಸುವುದು.

**ಏಕೆ?**

ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಮತ್ತು ಯೋಜನಾ ಕಾರ್ಯದ ಬಗ್ಗೆ ಗ್ರಾಮಸ್ಥರಿಗೆ ಹಾಗೂ ಈ ಕಾರ್ಯಕ್ರಮದ ಅಡಿಯಲ್ಲಿ ನಡೆಸುವ ವಿವಿಧ INRM ಕಾರ್ಯಗಳ ತಿಳುವಳಿಕೆ ಮೂಡಿಸಿ ಪ್ರಕೃತಿ ಸಂಪ ನ್ಮೂಲ ಆಧರಿಸಿ ಅವರ ಜೀವನೋಪಾಯ ಸುಧಾರಿಸುವುದು.

**ಹೇಗೆ?**

ಯೋಜನಾತಂಡ/ SHG ನಾಯಕರು/ವಾರ್ಡ್‌ಸದಸ್ಯ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿಯೋಜನೆ ಹಾಗೂ ಜೀವನಮಟ್ಟ ಏರಿಸುವ, ಪ್ರಕೃತಿ ವ್ಯವಸ್ಥೆ ಐಕ್ಯಗೊಳಿಸುವ ಯೋಜನೆ ಮತ್ತು ಇತರ ಯೋಜನೆಗಳ ಒಗ್ಗೂಡಿಸುವಿಕೆ ಬಗ್ಗೆ ಕರಪತ್ರ, ಕೈಪಿಡಿ, ಬ್ಯಾನರ್‌ಗಳು ಮತ್ತು ಚಲನ ಚಿತ್ರಗಳ ಮೂಲಕ ಗ್ರಾಮಸ್ಥರಿಗೆ ತಿಳಿಸುವುದು.

**ಯಾರು?**

ಪಂಚಾಯತಿ ಪ್ರತಿನಿಧಿಗಳು, SHG ಸದಸ್ಯರು, NGO ಪ್ರತಿನಿಧಿಗಳು, ಗ್ರಾಮಸಮಿತಿ ಪ್ರತಿನಿಧಿಗಳು ಮತ್ತು ಆಸಕ್ತಿ ವಹಿಸುವ ಇತರ ಹ್ಯಾಮ್ಲೆಟ್/ಗ್ರಾಮಗಳ ಗ್ರಾಮಸ್ಥರು.

**ಹ್ಯಾಮ್ಲೆಟ್/ಗ್ರಾಮಹಂತದ ಯೋಜನಾ ಕಾರ್ಯಗಳು:**

(ಅವಧಿ: 3/4 ದಿನಗಳು, ಅನುಕೂಲ ಉಂಟುಮಾಡುವವರು/ಯೋಜನಾ ತಂಡದ ಸದಸ್ಯರು: 3, ಹ್ಯಾಮ್ಲೆಟ್/ಗ್ರಾಮ ಪ್ರಮಾಣ–100 ಮನೆಗಳು (HHs))

**ಗ್ರಾಮಗಳ ಹಂತದಲ್ಲಿ ಯೋಜನಾ ಕಾರ್ಯಗಳ ನಿರೀಕ್ಷಿತ ಫಲಿತಾಂಶ:**

- ಸಮುದಾಯ ಜಾಗೃತಿ/ಹೊಲ ಬಲಪಡಿಸುವ ಬಗ್ಗೆ ಸಣ್ಣಹೈನುಗಾರಿಕೆ/NTFP ಜೀವನೋಪಾಯ ಇತರ ಚಟುವಟಿಕೆ ಗಳು/ಅವುಗಳ ಮೂಲಬಲಪಡಿಸುವುದು; ಇವುಗಳನ್ನು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಅಡಿ ಜಾರಿಗೆ ತರುವುದು.
- ಗುರ್ತಿಸಿದ ಚಟುವಟಿಕೆಗಳು/ಕಾರ್ಯಗಳು ಬಡಕುಟುಂಬಗಳ ಮತ್ತು ಇತರರ ಸಮುದಾಯದ ಜೀವನೋಪಾಯ ಏರಿಸಲು ಆದ್ಯತೆ ನೀಡುವುದು.
- ಬಡಕುಟುಂಬಗಳ ಕಾರ್ಮಿಕರ ಬೇಡಿಕೆ ಗುರ್ತಿಸುವುದು.
- ವಿವಿಧಯೋಜನೆಗಳನ್ನು ತಯಾರಿಸಿ ಕಾರ್ಮಿಕರ ಆಯವ್ಯಯ ಕಾಲಮಾನಕ್ಕೆ ತಕ್ಕಂತಹ ಪ್ರಾಮುಖ್ಯತೆ ನೀಡುವುದು. IAY, NSAP ಮತ್ತು GKYಗಳ ಅಡಿಯಲ್ಲಿ ಬಡಕುಟುಂಬಗಳಿಗೆ ಬೇಡಿಕೆ ಪಟ್ಟಿ ತಯಾರಿಸುವುದು.

ಸಮುದಾಯದ ಬಡಕುಟುಂಬಗಳು ಮತ್ತು ಮಹಿಳೆಯರು ಯೋಜನಾಕಾರ್ಯದಲ್ಲಿ ಹೆಚ್ಚಾಗಿ ಭಾಗವಹಿಸುವುದನ್ನು ನಿರೀಕ್ಷಿಸಲಾಗಿದೆ. ಹಾಗೂ PRIಪ್ರತಿನಿಧಿಗಳು, SHGಗಳು VO ಭಾಗವಹಿಸುವುದನ್ನು ನಿರೀಕ್ಷಿಸಲಾಗಿದೆ.

ಗ್ರಾಮ ಯೋಜನಾಸಭೆಯನ್ನು ಗ್ರಾಮದ ಕೇಂದ್ರಸ್ಥಾನದಲ್ಲಿ ಏರ್ಪಡಿಸುವ ಮೂಲಕ ಎಲ್ಲಾ ಗ್ರಾಮಸ್ಥರು ಸುಖಾಸೀನರಾಗಿ ಭಾಗವಹಿಸುವಂತೆ ಕ್ರಮವಹಿಸುವುದು.

**ಹ್ಯಾಮ್ಲೆಟ್/ಗ್ರಾಮಗಳ ಯೋಜನಾ ಕಾರ್ಯಗಳನ್ನು ಯೋಜಿಸುವುದರ ವಿವರಗಳು**

| ಕ್ರಮಗಳು | ಉದ್ದೇಶ | ವಿಷಯ | ಸಮಯ |
| --- | --- | --- | --- |
| ದಿನ–1 | | | |
| ಕ್ರಮದ ಸಿದ್ಧತೆ | BPT ಸದಸ್ಯರನ್ನು ಗ್ರಾಮದಲ್ಲಿ ಪರಿಚಯಿಸುವುದು | ವಾರ್ಡ್‌ಸದಸ್ಯರು/ BPTಸದಸ್ಯರಿಗೆ GRS ಸಮುದಾಯದ ಮುಖ್ಯ ಸ್ಥರಿಗೆ ಹಾಗೂ ಪ್ರಮುಖ ಪ್ರಚಾರಕರಿಗೆ, SHG ನಾಯಕರಿಗೆ ಮತ್ತು ಯುವ ಸ್ವಯಂಸೇವಕರಿಗೆ ಇತ್ಯಾದಿಗಳಿಗೆ ಪರಿಚಯಿಸುವುದು | ಬೆಳಿಗ್ಗೆ 9.30 |
| ಪಾದಯಾತ್ರೆ ಮೂಲಕ ಸಂಕ್ಷಿಪ್ತವಾಗಿ ಗ್ರಾಮದಲ್ಲಿ ಪ್ರಚಾರ ಮಾಡುವುದು | ಗ್ರಾಮಸ್ಥರೊಂದಿಗೆ ಬೆರೆತು ಆತ್ಮೀಯತೆ ಬೆಳಸಿಕೊಳ್ಳುವುದು | BPTಸದಸ್ಯರು ಸಣ್ಣ ಪಾದಯಾತ್ರೆ ಮೂಲಕ ಕೆಲವು ಗ್ರಾಮಸ್ಥರೊಂದಿಗೆ ಗ್ರಾಮದ ಮೂಲೆ ಮೂಲೆಗಳಲ್ಲಿ ಪ್ರಚಾರಮಾಡುವುದು | ಬೆಳಿಗ್ಗೆ 10.00 ರಿಂದ 11.00 |
| ಪರಿಚಯ ಮತ್ತು ಕಾರ್ಯಕ್ರಮದ ಪ್ರಾರಂಭ | ಈ ಯೋಜನೆಗಳ ಉದ್ದೇಶ ಮತ್ತು ಸ್ಪಷ್ಟತೆಯಿಂದ ಈಕಾರ್ಯಗಳಲ್ಲಿ ಸಮುದಾಯದವರು ಭಾಗವಹಿಸಲು ಉತ್ಸುಕವಾಗುತ್ತಾರೆ. | ವಾರ್ಡ್ ಸದಸ್ಯರಿಂದ ಪರಿಚಯ–IPPE ಮತ್ತು IPPE -II ಗಳ ನಡುವೆ 3/4ದಿನದ ಸಂಕ್ಷಿಪ್ತವಿನಿಮಯ ಸೆಷನ್‌ನ ವಿನಿಮಯದ ಫಲಿತಾಂಶ ನಿರೀಕ್ಷಿಸಲಾಗಿದೆ. ಗ್ರಾಮದ/ಹ್ಯಾಮ್ಲೆಟ್‌ಯೋಜನೆ/ಅಭಿವೃದ್ಧಿ ಸಮಿತಿಗಳ ನಿರ್ಮಾಣ. ಇದನ್ನು ಬಹುಶಃ ವಾರ್ಡ್‌ಸದಸ್ಯರು ಮತ್ತು GRS ಮಾಡುತ್ತಾರೆ. (ಅನುಕೂಲದ ಟಿಪ್ಪಣಿ–1) | ಮಧ್ಯಾಹ್ನ 12.00 ರಿಂದ 2.00 |
| ಸಾಮಾಜಿಕ ನಕ್ಷೆ ಮಾಡುವುದು | ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಸಮುದಾಯವನ್ನು ಅರ್ಥಮಾಡಿಕೊಂಡು ಮತ್ತು ಗ್ರಾಮ ಜೀವನದ ವಿಷಯ ಮತ್ತು ಸಾಧ್ಯವಾದ ಕಾರ್ಯ ಗುರ್ತಿಸುವುದು | ತುಂಬು ಮನಸ್ಸಿನಿಂದ ಸಮುದಾಯದೊಡನೆ ಪ್ರತ್ಯಕ್ಷವಾಗಿ ಗ್ರಾಮಗಳ ರೀತಿ ನೀತಿಯ ವಿವಿಧ ಸಮಾಜಿಕಕ್ರಮಗಳೊಂದಿಗೆ ವ್ಯವಹರಿಸುವುದು. ಬಡಜನರ ಮತ್ತು ಇತರರಿಗೆ ಕುಡಿಯುವ ನೀರು, ನೈರ್ಮಲ್ಯ ಮತ್ತು ವಿವಿಧ ಸಾಮಾನ್ಯ ಸಾಮಾಜಿಕ ಮೂಲಭೂತ ಸೌಕರ್ಯಗಳಾದ ಶಾಲೆ, AWCs ಸ್ನಾನದ ಸ್ಥಳ ಇತ್ಯಾದಿಗಳನ್ನು ಸಾಮಾಜಿಕ ನಕ್ಷೆ ತಯಾರಿಸುವ ಮೂಲಕ ಏರ್ಪಡಿಸುವುದು. (ಅನುಕೂಲದ ಟಿಪ್ಪಣಿ–2) | ಮಧ್ಯಾಹ್ನ 12.00 ರಿಂದ 2.00 |
| ಊಟದ ಸಮಯ | | ಗ್ರಾಮಗಳಲ್ಲಿ BPT ಊಟ ಹಣಪಾವತಿ ಮೇಲೆ | |
| ಗ್ರಾಮೀಣ ವಿಷಯ, ಬಡತನ ಚಿತ್ರಣ | ಸಾಮಾನ್ಯವಾಗಿ ಗ್ರಾಮೀಣ ಜೀವನ ಸ್ಥಿತಿ ತಿಳಿಯಲು | ಆಹಾರ ಅಭಾವದ ಪ್ರಮಾಣ ಮತ್ತು ಅದರ ಹಂಚಿಕೆ, ವಲಸೆ ಚಿತ್ರಣ, ಮಾರುಕಟ್ಟೆಗೆ ಸಂಬಂಧಿಸಿದ ವಿಷಯ, ಸಾಲದ ಮೂಲಗಳು PRIಗೆ ಸಂಬಂಧಿಸಿದ್ದು, ಸರ್ಕಾರಿ ಇಲಾಖೆಗಳು, ಮುಂದುವರೆದ ವಿವಿಧ ಕಾರ್ಯಕ್ರಮಗಳು ಇತ್ಯಾದಿ.ಗ್ರಾಮ ಹೇಗೆ ಹೊರ ಪ್ರಪಂಚಕ್ಕೆ ಸಂಪರ್ಕಹೊಂದಿದೆ ಇತ್ಯಾದಿ.(ಅನುಕೂಲದ ಟಿಪ್ಪಣಿ–3) | ಮಧ್ಯಾಹ್ನ 3.00 ರಿಂದ 3.45ವರೆಗೆ |
| ಗ್ರಾಮದ ಜೀವನ ಶೈಲಿ ವಿಶ್ಲೇಷಣೆ | ಈಗಿನ ಗ್ರಾಮದ ಜೀವನ ಶೈಲಿ ಅರ್ಥಮಾಡಿಕೊಳ್ಳುವುದು ಪರಿಸ್ಥಿತಿ, ವಿಷಯ ಮತ್ತು ಅವುಗಳನ್ನು ಬಲ ಪಡಿಸುವ ವಿಧಾನ. | ಗ್ರಾಮಗಳ ಮುಖ್ಯ ಜೀವನಶೈಲಿ ಗುರ್ತಿಸುವುದು ಅವುಗಳ ಪ್ರಾಮುಖ್ಯತೆಗೆ ಶೇಖಡಾವಾರು ಕುಟುಂಬಗಳು, ಅವುಗಳಿಸುವ ವರಮಾನದ ಪ್ರಮಾಣ. ಗ್ರಾಮಜೀವನದ ಮುಖ್ಯ ವಿಷಯಅರ್ಥಮಾಡಿಕೊಳ್ಳುವುದು ಅವುಗಳ ಬದಲಾವಣೆಗೆ ವಿಶಾಲವಾದ ವ್ಯವಸ್ಥೆ. (ಅನುಕೂಲದ ಟಿಪ್ಪಣಿ–4) | ಮಧ್ಯಾಹ್ನ 3.45 ರಿಂದ 4.30ವರೆಗೆ |
| ಸಂಪನ್ಮೂಲದ ನಕ್ಷೆ ತಯಾರಿಸುವುದು | ಲಭ್ಯವಿರುವ ಸಂಪನ್ಮೂಲದ ಸಂಪೂರ್ಣ ಚಿತ್ರ ತಯಾರಿಸುವುದು ಮತ್ತು INRM ಗಾಗಿ ಕೆಲವು ವಿಷಯ ಗುರ್ತಿಸುವುದು | ಸಂಪನ್ಮೂಲನಕ್ಷೆಯನ್ನು ವಿವಿಧ ನೈಸರ್ಗಿಕಸಂಪನ್ಮೂಲಗಳಾದ ನೀರು, ಭೂಮಿ ಮತ್ತು ಸಾಮಾನ್ಯಸಂಪನ್ಮೂಲಗಳು ಹಾಗೂ ಅವು ಳ ಪ್ರಸ್ತುತ ಹಂತ ಮತ್ತು ಬದಲಾವಣೆ ಅದರ ಶಕ್ತಿಯುತ ಉಪಯೋಗ. ಕೃಷಿಯ ವಿವಿಧ ಹಂತಗಳಾದ ಮಾಲೀಕತ್ವ ಅದರ ಉಪಯೋಗ ಮತ್ತು ಸಂಬಂಧಪಟ್ಟ ಸಮಸ್ಯೆ ಇತ್ಯಾದಿ (ಅನುಕೂಲದ ಟಿಪ್ಪಣಿ–5) | 4.30ರಿಂದ ರಿಂದ6.30 ವರೆಗೆ |
| ದಿನ–2 | | | |
| ಅವಕಾಶ ಗುರ್ತಿಸಲು ಪಾದಯಾತ್ರೆ ಮಾಡುವುದು. | ಗುರ್ತಿಸಿದ ಸ್ಥಳಗಳಿಗೆ ಭೇಟಿ ಮಾಡಲು ಮತ್ತು ಸಮಸ್ಯೆಯ ತೀವ್ರವಾಗಿ ಪರಿಶೀಲಿಸಲು ಅವಕಾಶ ಕಲ್ಪಿಸುವುದು. | ಬಲಹೀನರ ಮಾಲೀಕತ್ವವನ್ನು ಅವಲಂಬಿಸಿ ಭೂಮಿ ತುಂಡುಗಳಿಗೆ ಭೇಟಿಮಾಡುವುದು. BPTಸದಸ್ಯರು ಸ್ವತಃ ಈ ಬಗ್ಗೆ ಮಾಲೀಕರ ಸಮೇತ ಭೇಟಿಮಾಡಿ ಪರಿಸ್ಥಿತಿ ಅರ್ಥಮಾಡಿಕೊಂಡು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ ಮೂಲಕ ಪರಿ | ಬೆಳಿಗ್ಗೆ 9.00ರಿಂದ ಮಧ್ಯಾಹ್ನ 2.00ವರೆಗೆ |

| | | | |
|---|---|---|---|
| | | ಶೀಲಿಸುವುದು. (ಅನುಕೂಲದ ಟಿಪ್ಪಣಿ–6) | |
| ಊಟ | | | |
| IAY, GKY ಮತ್ತು NSAP ಹಾಗೂ ಕೆಲಸದ ಬೇಡಿಕೆ ನಮೂನೆಗಳು | ನಿರ್ದಿಷ್ಟ ನಮೂನೆಗಳ ಹಂಚಿಕೆ ಮತ್ತು ಯುವ ಸ್ವಯಂಸೇವಕರು/ SHGನಾಯಕರ ಜವಾಬ್ದಾರಿ. | ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಯನ್ನು ಜೀವಂತವಾಗಿ ಕಾರ್ಯನಿರ್ವಹಿಸಲು ಬೇಕಾದ ಮುಖ್ಯವಾದ ಮಾಹಿತಿ ಸಂಗ್ರಹಿಸುವುದಕ್ಕೆ BPT ಉಪಯೋಗಿಸಲು ಇದೊಂದು ಅವಕಾಶ. | ಸಮವರ್ತಿತ |
| ಇಬ್ಬರು BPT ಸದಸ್ಯರಿಂದ ಜೀವನ ಮಟ್ಟದ ಯೋಜನೆಗಾಗಿ ವೈಯಕ್ತಿಕ HH ಭೇಟಿ (10–15 HHs) | ದುರ್ಬಲರ ಮನೆಗಳನ್ನು ಗುರ್ತಿಸಿ ಸಹಾಯಮಾಡಲು ವೈಯಕ್ತಿಕ ಜೀವನ ಬಲಪಡಿಸುವ ಕಾರ್ಯಗಳು | ಮಹಾತ್ಮಗಾಂಧಿ ಗ್ರಾಮೀಣಉದ್ಯೋಗಖಾತರಿಯೋಜನೆ ಅಡಿ ಗುರ್ತಿಸಿದ ಬಲಹೀನರೊಂದಿಗೆ ವ್ಯವಹರಿಸಿ HHs (SECC ಮಾಹಿತಿಬಳಸಿ ಅಥವಾ ಬೇರೆ ರೀತಿ) ಗುರ್ತಿಸಿದಮನೆಗಳ ಸರ್ವೆ/ಪ್ರತಿಕ್ರಿಯೆ ಅಗತ್ಯವಿದ್ದಲ್ಲಿ 5–6ಮನೆಗಳ ಚಿಕ್ಕಗುಂಪು (ಅನುಕೂಲದ ಟಿಪ್ಪಣಿ–8) | ಮಧ್ಯಾಹ್ನ 3.00ರಿಂದ 6.00ವರೆಗೆ |
| ಕಾರ್ಮಿಕ ಆಯವ್ಯಯದ ಅಂದಾಜು ಮತ್ತು ಋತುಮಾನ ನಕ್ಷೆ | ದುರ್ಬಲರಿಗಾಗಿ ಕಾರ್ಮಿಕ ಆಯವ್ಯಯ ತಯಾರಿಸುವುದು | ಜಾಬ್‌ಕಾರ್ಡ್ ಹೊಂದಿದವರೊಡನೆ ಚರ್ಚಿಸಿಕಾರ್ಮಿಕರ ಅಗತ್ಯ ಮತ್ತು ಬೇಡಿಕೆಯನ್ನು ನಿರ್ದಿಷ್ಟ ನಮೂನೆಯಲ್ಲಿ ತಯಾರಿಸುವುದು. | ಮಧ್ಯಾಹ್ನ 3.00ರಿಂದ 6.00ವರೆಗೆ |
| ಗುರ್ತಿಸಿದ ಕಾಮಗಾರಿಗಳ ತುಲನೆ ಮತ್ತು ಋತುಮಾನ ಆಯವ್ಯಯದ ಅಂದಾಜು | (ದುರ್ಬಲರ ಮನೆಗಳ ವೈಯಕ್ತಿಕ ಮತ್ತು ಎಲ್ಲರ ಕಾಮಗಾರಿಗಳ ಮೂಲಭೂತ ಸೌಕರ್ಯಗಳ ಋತುಮಾನ ಆಯವ್ಯಯದ ಅಂದಾಜು) ಗುರ್ತಿಸಿದ ಕಾಮಗಾರಿಗಳ ತುಲನೆ ಮತ್ತು ಕಾರ್ಮಿಕರ ಆಯವ್ಯಯ ತಯಾರಿಕೆ | ಜವಾಬ್ದಾರಿಯುಳ್ಳ ಸದಸ್ಯರು ಸರ್ವೆನಮೂನೆಯಲ್ಲಿ ವಿವರ ಭರ್ತಿಮಾಡಿ ತುಲನೆಮಾಡಬೇಕು ಮತ್ತು ಇತರ ಇಬ್ಬರು ಸದಸ್ಯರು ವಿವಿಧ ಕಾಮಗಾರಿಗಳನ್ನು ಗುರ್ತಿಸಿ/ಉದ್ದೇಶಿತ ಯೋಜನೆಗಳ ಪಟ್ಟಿ ತಯಾರಿಸುವುದು. ನಿಗದಿತಮಾದರಿಯಲ್ಲಿ ಗುರ್ತಿಸಿದ ಕಾಮಗಾರಿಗಳ PDಗಳ ಲೆಕ್ಕಾಚಾರ ನಡೆಸುವುದು. ಗ್ರಾಮಸಭೆಯಲ್ಲಿ ಚರ್ಚಿಸಲು ಕರಡು ಪ್ರಸ್ತಾವನೆ ತಯಾರಿಸುವುದು. | ಸಂಜೆ ಎರಡು ಗಂಟೆಗಳ ಕಾಲ |
| ವೈಯಕ್ತಿಕ ಜೀವನಮಟ್ಟದ ಯೋಜನೆ | ದಿನ–2ರಲ್ಲಿದ್ದಂತೆ | ದಿನ–2ರಲ್ಲಿದ್ದಂತೆ | ಬೆಳಿಗ್ಗೆ 9.00 ರಿಂದ 11.00 |
| NSAP, IAY, GKY ನಮೂನೆಗಳಲ್ಲಿ ಮಾಹಿತಿಯನ್ನು ಮೂರನೇ ಸದಸ್ಯರು ಭರ್ತಿಮಾಡುವುದು ಹಾಗೂ ಯಾವುದಾದರೂ ಖಾಲಿ ಇರುವ ನಮೂನೆ ಭರ್ತಿಮಾಡುವುದು. | | | |
| ಸಲ್ಲಿಸಬೇಕಾದ ತುಲನಾತ್ಮಕ ನಮೂನೆಯ ಅಂತಿಮ ತಯಾರಿಕೆ | ಯೋಜನೆ/ಅಂಕಿಅಂಶದ ಫಲವನ್ನು ಗ್ರಾಮಸ್ಥರ ನಡುವೆ BPT ಹಂಚಿಕೊಳ್ಳುವುದು | ಯೋಜನಾತಂಡ ಹ್ಯಾಮ್ಲೆಟ್/ಗ್ರಾಮ ಅಭಿವೃದ್ಧಿ ಸಮಿತಿಗೆ ಭೇಟಿ ನೀಡಿ ಕೆಲಸಗಳನ್ನು ತೀವ್ರಗೊಳಿಸುವುದು. ಇದನ್ನು ಸಮುದಾಯದೊಂದಿಗೆ ಅವರ ವಿಚಾರ ಮತ್ತು ಅನುಮೋದನೆಗಾಗಿ ಹಂಚಿಕೊಳ್ಳಲಾಗುವುದು. (ಅನುಕೂಲದ ಟಿಪ್ಪಣಿ–9) | ಬೆಳಿಗ್ಗೆ 11.30ರಿಂದ 2.00 |
| ಕಾಮಗಾರಿಗೆ ಆದ್ಯತೆ ಪಡೆಯಲು ಮತ್ತು ಕಾಮಗಾರಿಗಳ ದಾಖಲೆಗಳಿಗೆ ಆದ್ಯತೆ ನೀಡುವುದು | ಯೋಜನಾವಿಧಾನದ ಮೂಲಕ ಬರುವ ಕಾಮಗಾರಿಗಳ ಪ್ರಸ್ತಾವನೆ ಮತ್ತು ಆದ್ಯತೆಯುಳ್ಳ ಪಟ್ಟಿಯನ್ನು ಚರ್ಚೆಮೂಲಕ ಗ್ರಾಮ ಸಭೆಯ ಅನುಮೋದನೆ ಪಡೆಯುವುದು. | ಇಡೀ ಗ್ರಾಮಕ್ಕೆ BPT ವಿವಿಧಕಾಮಗಾರಿಗಳ ಸಮಗ್ರವಾಗಿ ಗುರ್ತಿಸಿ ದುರ್ಬಲರ ಮನೆಮಾರುಗಳಿಗೆ ಜೀವನಮಟ್ಟಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಕಾರ್ಮಿಕ ಆಯವ್ಯಯ ತಯಾರಿಸುವುದು. ಪೂರ್ವಸಿದ್ಧತೆ ನಮೂನೆಯಲ್ಲಿ ಆದ್ಯತೆಯ ಕಾಮಗಾರಿಗಳ ಅನುಮೋದನೆ ಗ್ರಾಮಸಭೆಯಲ್ಲಿ ಪಡೆಯುವುದು. (ಅನುಕೂಲದ ಟಿಪ್ಪಣಿ–10) | ಮಧ್ಯಾಹ್ನ 2.00ರಿಂದ 6.00ವರೆಗೆ |

3. **ಸರಳೀಕರಣ ಟಿಪ್ಪಣಿಗಳು:**

**ಸರಳೀಕರಣ ಟಿಪ್ಪಣಿ–1 (ಪರಿಚಯ ಮತ್ತು ಆರಂಭದ ಸಭೆ)**

- IPPE ಬಗ್ಗೆ ಕೇಳಿದ್ದೀರಾ?
- ಈ ಪ್ರಚಾರದ ಮೂಲ ಉದ್ದೇಶ ಯೋಜನೆಯಲ್ಲಿ ಗ್ರಾಮಸ್ಥರು ಭಾಗವಹಿಸಿ, ತೀರಾ ಬಡವರ ಜೀವನಮಟ್ಟ ಸುಧಾರಿಸುವ ಚಟುವಟಿಕೆಗಳು ಮತ್ತು ನೈಸರ್ಗಿಕ ಸಂಪನ್ಮೂಲ ಹೆಚ್ಚಿಸುವ ಯೋಜನೆಗಳ ಒಗ್ಗೂಡಿಸುವುದು.

- 3/4 ದಿನದಷ್ಟು ಕಾಲ ಈ ಪ್ರಚಾರ ತೆಗೆದುಕೊಳ್ಳುವ ಯೋಜನಾಕಾರ್ಯದಲ್ಲಿ ಗ್ರಾಮಸ್ಥರು ಭಾಗವಹಿಸುವುದು ಬಹಳ ಮುಖ್ಯವಾಗುತ್ತದೆ.(ಯೋಜನೆ ಕಾರ್ಯದ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸುವುದು)
- ಗ್ರಾಮದ ಜಾಬ್‌ಕಾರ್ಡ್‌ಗಳನ್ನು ಪರಿಶೀಲಿಸಿ, ಈ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಜಾಬ್‌ಕಾರ್ಡ್‌ಗಳ ಅಗತ್ಯವಿರುವುದನ್ನು ಪರಿಶೀಲಿಸುವುದು ಹಾಗೂ ಇದೇ ಸಮಯದಲ್ಲಿ ಹೊಸಜಾಬ್‌ಕಾರ್ಡ್‌ಗಳ ನೋಂದಾಯಿಸುವುದು.
- ಒಟ್ಟು ಜಾಬ್‌ಕಾರ್ಡ್‌ಗಳ ಸಂಖ್ಯೆಯೊಂದಿಗೆ ಹೊಸದಾಗಿ ಬೇಡಿಕೆ ಇರುವ ಜಾಬ್‌ಕಾರ್ಡ್‌ಗಳ ಅಗತ್ಯಕ್ಕೆ ಅನುಗುಣವಾಗಿ (ಈಗಿರುವ ಮತ್ತು ಬೇಡಿಕೆ ಇರುವ) ಇದಕ್ಕೆ 100ದಿನಗಳ ಅವಧಿ ನಿಗದಿಪಡಿಸಿ ಅದರ 60:40ಅನುಪಾತದೊಂದಿಗೆ, ಹ್ಯಾಮ್ಲೆಟ್/ಗ್ರಾಮ ತಾತ್ಕಾಲಿಕ ಮೊತ್ತದ ಆಯವ್ಯಯ ಸೃಜಿಸುವುದು. (ಒಟ್ಟು ಜಾಬ್‌ಕಾರ್ಡ್‌ಗಳ ಸಂಖ್ಯೆ *100* ಸ್ಥಳೀಯ ಕೂಲಿ ಪ್ರಮಾಣ*1.67) ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯ ಮೂಲಕ ಗ್ರಾಮದ ಅಭಿವೃದ್ಧಿಗೆ ವಿಷಯ ಹಂಚಿಕೊಳ್ಳುವುದು.
- ವಿವಿಧ ಕಾಮಗಾರಿಗಳ ಯೋಜನೆ ಮೂಲಕ ಸಾಮಾನ್ಯ ಜನರ ಜೀವನ ಮಟ್ಟ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗ ದವರ ಕುಟುಂಬಗಳನ್ನು ಗುರ್ತಿಸಿ ಪ್ರಾಮುಖ್ಯತೆನೀಡುವುದು. ಪ್ರಸ್ತುತ ಕಾಮಗಾರಿಗಳನ್ನು (IPPE-1 ರ ಪ್ರಕಾರ ಯೋಜಿಸಿ ದ ಕಾಮಗಾರಿಗಳು) ಪುನಃ ಪರಿಶೀಲಿಸಿ, ಅಗತ್ಯವಿದ್ದಷ್ಟು ಮಾರ್ಪಡಿಸುವುದು.
- SHG ನಾಯಕ (3–4)ರೊಡನೆ ಯೋಜನಾಸಮಿತಿ ಮತ್ತು ಹಿಂದಿನ ವಾರ್ಡ್‌ಸದಸ್ಯರು, ವಿವಿಧ ಹ್ಯಾಮ್ಲೆಟ್ ಪ್ರತಿನಿಧಿಸುವ ಮತ್ತು ಎಲ್ಲಾ ಜಾತಿ ಮತ್ತು ವರ್ಗ, BPTಸದಸ್ಯರೊಂದಿಗೆ 3–4 ದಿನ ಚರ್ಚಿಸಿ ಅಂಗನವಾಡಿ ಕೆಲಸಗಾರರು ಸಹಾಯ ಮಾಡುವುದು. ಹೆಸರನ್ನು ಸೃಜಿಸಿ ಸಮಿತಿ ಅಂತಿಮಗೊಳಿಸಿ; ಅವುಗಳನ್ನು ಗುರ್ತಿಸುವುದು. ಇದಕ್ಕೆ ಅನುಮೋದನೆ/ ನೋಂದಣಿ ಅಗತ್ಯವಿಲ್ಲ.
- ಮಹಿಳೆಯರು ಮತ್ತು ದುರ್ಬಲ ವರ್ಗದ ಜನರು ಭಾಗವಹಿಸುವಂತೆ ಕೋರಬಹುದು.
- ಮಾಹಿತಿ ಸೃಜಿಸಲು ಮತ್ತು ಸಂಬಂಧಪಟ್ಟ ಇಲಾಖೆಗಳು ನಡೆಸಿರುವ ಕಾರ್ಯಯೋಜನೆಗಳನ್ನು ವಿವರಿಸಬೇಕು.

**ಸರಳೀಕರಣ ಟಿಪ್ಪಣಿ–2**

**ಏಕೆ?**

ನಿರ್ಧರಿತ ವ್ಯವಸ್ಥೆ, ವಿವಿಧ ಜಾತಿವರ್ಗಗಳು, ವಿವಿಧ ಸಾಮಾಜಿಕ/ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಗುರ್ತಿಸುವುದು/ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ನಡೆದ ಕಾಮಗಾರಿಗಳನ್ನು ಅರ್ಥಮಾಡಿಕೊಳ್ಳುವುದು.

- ಗ್ರಾಮಗಳಲ್ಲಿ SHG ಇರುವುದೇ? ಅವು ಎಷ್ಟು? ಅವುಗಳನ್ನು ಮಾಡಲು ಸಹಾಯಮಾಡಿದವರು ಯಾರು?
- ನಿಮ್ಮ ಗ್ರಾಮದಲ್ಲಿ ಕ್ಲಬ್‌ಗಳು ಅಥವಾ ಯಾವುದಾದರೂ ಸಮಿತಿ ಇತ್ಯಾದಿ ಇರುವುದೇ? ಅವುಗಳ ಬಗ್ಗೆ ತಿಳಿಸಿ.
- ಗ್ರಾಮದಲ್ಲಿರುವ ವಿವಿಧ ಜಾತಿಗಳು/ಸಮುದಾಯಗಳು ಇರುತ್ತವೆ? ನಿಮ್ಮ ಗ್ರಾಮದಲ್ಲಿ ಇರುವ ಮನೆಗಳು ಎಷ್ಟು? ವಿವಿಧ ಜಾತಿಗಳು/ ಧರ್ಮಕ್ಕೆ ಸೇರಿದ ಮನೆಗಳ ಅಂದಾಜು ಸಂಖ್ಯೆ ಎಷ್ಟು? ಅವು ಒಟ್ಟಾಗಿರುವುದೇ ಅಥವಾ ಪ್ರತ್ಯೇಕವಾಗಿರುವುದೇ?
- ಹಿಂದಿನ IPPE-I ಸಾಮಾಜಿಕ ನಕ್ಷೆ ತಯಾರಿಸಿರುವಿರಾ? ಹೌದಾದರೆ ಅದನ್ನು ತೋರಿಸಿ ಮತ್ತು ಹಂಚಿಕೊಳ್ಳಿ.
- ನಿಮ್ಮ ಗ್ರಾಮಗಳಲ್ಲಿ ಇರುವ ಕಂದಾಯ ಗ್ರಾಮದ ರಸ್ತೆಗಳು, ಶಾಲೆ, ಗುಡಿಗಳು, ಗ್ರಾಮದ ಹೊಂಡ ಮತ್ತು ಆಟದ ಮೈದಾನ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಇಲ್ಲದಿದ್ದಲ್ಲಿ ಒಟ್ಟಿಗೆ ಸೇರಿ ಬ್ರೌನ್ ಪೇಪರಿನಲ್ಲಿ ಮಾಡೋಣ
- ಚಾರ್ಟ್‌ಗಳನ್ನು ಬರೆಯುವ ಮೂಲಕ ಸಭೆ ನಡೆಸಿದ ಸ್ಥಳವನ್ನು ಗುರ್ತಿಸುವುದು. ನಂತರ ಸಾಮಾನ್ಯ ಮೂಲಸೌಲಭ್ಯಗಳಾದ ಕೊಳವೆ ಬಾವಿ, ಶಾಲೆ ಕಟ್ಟಡ, ಗ್ರಾಮದ ಹೊಂಡ ಮತ್ತು ಅಂಗನವಾಡಿಕೇಂದ್ರವನ್ನು ಗುರ್ತಿಸಲು ಗ್ರಾಮಸ್ಥರಿಗೆ ವಿವಿಧ ಬಣ್ಣಗಳ ಮೂಲಕ ಬ್ರೌನ್‌ಪೇಪರ್‌ನಲ್ಲಿ ತಿಳಿಸಿ ಹೇಳುವುದು. ಬಿಂದಿ ಹಚ್ಚುವ ಮೂಲಕ ವಿವಿಧ ಮನೆಗಳನ್ನು ಗುರ್ತಿಸುವುದು. ಇನ್ನ್ಯಾವುದಾದರೂ ಅಂಶ ಬಿಟ್ಟುಹೋದಲ್ಲಿ ಅದನ್ನು ಗ್ರಾಮಸ್ಥರು ಗುರ್ತಿಸಿದಲ್ಲಿ ಅದನ್ನು ಸೇರಿಸುವುದು.
- ಕಂದಾಯ ಗ್ರಾಮದಲ್ಲಿ ಕುಡಿಯುವ ನೀರಿಗೆ ಮಾಡಿದ ವ್ಯವಸ್ಥೆ? ಅದು ಸಾಕಾಗುವುದೇ?

- ಕಂದಾಯ ಗ್ರಾಮದಲ್ಲಿ ಒಳಚರಂಡಿಯ ಪರಿಸ್ಥಿತಿ ಏನು? ಗ್ರಾಮದ ಮನೆಗಳಲ್ಲಿ ಶೌಚಾಲಯಗಳಿವೆ? ಇದ್ದಲ್ಲಿ ಎಷ್ಟು ಮನೆಗಳಲ್ಲಿವೆ?
- ಗ್ರಾಮದ ಅಥವಾ ಕಂದಾಯ ಗ್ರಾಮದ ಅಂಗನವಾಡಿಶಾಲೆಯ ಸ್ಥಿತಿ ಏನು?
- ಗ್ರಾಮದ ಎಲ್ಲಾ ಮನೆಗಳು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಮಾಡುವವರು ಜಾಬ್ ಕಾರ್ಡ್ ಮತ್ತು ಬ್ಯಾಂಕ್ ಅಕೌಂಟ್ ಹೊಂದಿರುವರೆ?
- ಅಂಗನವಾಡಿಗೆ ಸಂಬಂಧಿಸಿದಂತೆ ಕುಡಿಯುವ ನೀರು, ಸ್ನಾನ ಮತ್ತು ಶೌಚಾಲಯ ಸೌಲಭ್ಯ, ಒಳಚರಂಡಿ ಕಾಮಗಾರಿ ಬಾಕಿ ಇರುವುದೇ?
- ಗ್ರಾಮದಲ್ಲಿ ನಡೆಸಬಹುದಾದ ಪ್ರಮುಖ ಕಾಮಗಾರಿ ಯಾವುದು? ಏಕೆ ಪ್ರಾಮುಖ್ಯತೆ ಪಡೆದಿದೆ? ಇದರಿಂದ ಯಾರಿಗೆ ಹೇಗೆ ಅನುಕೂಲವಾಗುತ್ತದೆ?
- ಪ್ರಾಮುಖ್ಯತೆ ಪಡೆದ ಕಾಮಗಾರಿಗಳ ಪಟ್ಟಿ ತಯಾರಿಸಿ.

ಟಿಪ್ಪಣಿ: ಹಿಂದಿನ ವರ್ಷದ ಸಾಮಾಜಿಕ ನಕ್ಷೆ ಲಭ್ಯವಿದ್ದಲ್ಲಿ ಮೇಲಿನ ಅಂಶಗಳನ್ನು ಚರ್ಚಿಸಿ ಅಂತಿಮಗೊಳಿಸುವುದು.

**ಸರಳೀಕರಣ ಟಿಪ್ಪಣಿ–3(ಗ್ರಾಮದ ಸಾಮಾನ್ಯ ವಿಷಯಗಳು)**

- ಕಂದಾಯ ಗ್ರಾಮಗಳಲ್ಲಿ ವಲಸೆಹೋದವರ ಪರಿಸ್ಥಿತಿ ಏನು? ಎಲ್ಲಿಗೆ, ಎಷ್ಟು ಕಾಲ? ಅವರು ಏನು ಮಾಡಬೇಕು? ಪುರುಷರೇ, ಮಹಿಳೆಯರೆ ಮತ್ತು ಯುವಕರೆ ಇತ್ಯಾದಿ ಯಾರು ಹೋಗಬೇಕು?
- ನಿಮ್ಮ ಕಂದಾಯಗ್ರಾಮದಲ್ಲಿ ಆಹಾರ ಭದ್ರತೆಯ ಅಂದಾಜು ಎಷ್ಟು?
- 2–3 ತಿಂಗಳ ಆಹಾರ ಅಭಾವ, 6 ತಿಂಗಳ ಆಹಾರ ಅಭಾವ ಈ ನಿಟ್ಟಿನಲ್ಲಿ ಎಷ್ಟು ಶತಾಂಶದ ಮನೆಗಳು ಬರುತ್ತವೆ?
- ಕಂದಾಯಗ್ರಾಮದಲ್ಲಿ ಇರುವ ಬಡತನಕ್ಕೆ ಮುಖ್ಯ ಕಾರಣಗಳೇನು?
  - ಭೂ ಹೀನರ ಸಂಖ್ಯೆ
  - ಪ್ರಕೃತಿ ವಿಕೋಪ, ಬರಗಾಲ/ಪ್ರವಾಹ
  - ಇತರೆ ಕಾರಣಗಳು
- ನಿಮ್ಮ ಹ್ಯಾಮ್ಲೆಟ್‌ನಲ್ಲಿ ಆಹಾರ ಭದ್ರತೆ ಫಲಾನುಭವಿಗಳ ಪರಿಸ್ಥಿತಿ ಏನು?
- ಮಾರುಕಟ್ಟೆಯ ವಿವಿಧ ಹಂತಗಳಾದ ಸ್ಥಳೀಯ, ಮಧ್ಯಮ ಮತ್ತು ಅಂತಿಮಘಟ್ಟಗಳು ಹೇಗೆ ಒಂದಕ್ಕೊಂದು ಸಂಪರ್ಕ ಹೊಂದಿದೆ.
- ತಮ್ಮ ಉತ್ಪನ್ನಗಳನ್ನು ಮಾರಾಟಮಾಡಲು ಏನಾದರೂ ತೊಂದರೆ ಇರುವುದೇ? ಇದ್ದಲ್ಲಿ ಅವು ಯಾವುವು?
- ಅಗತ್ಯವಿರುವ ಬೀಜಗಳು, ಗೊಬ್ಬರ ಮತ್ತು ಇತರ ಅಂಶಗಳ ಬಗ್ಗೆ ಏನಾದರೂ ಸಮಸ್ಯೆ ಇರುವುದೇ?
- ಸಾಲ ಪಡೆಯುವುದು ಸುಲಭವಿರುವುದೇ? ಕೆಸಿಸಿಯ ಪರಿಸ್ಥಿತಿ ಏನು?
- ಸಾಲದ ಇತರ ಮುಖ್ಯ ಮೂಲಗಳು ಯಾವುವು? ಅವು ಜನಸಾಮಾನ್ಯರಿಗೆ ತಲುಪುವುದೇ/ ಇತರ ಮೂಲಗಳು ಯಾವುವು? ಅದನ್ನು ಜನಸಾಮಾನ್ಯರು ಭರಿಸಲು ಸಾಧ್ಯವೆ?
- ಕೃಷಿ, ಪಶುಸಂಗೋಪನೆ ಮತ್ತು ಇತರ ಇಲಾಖೆಗಳೊಂದಿಗೆ ನಿಮ್ಮ ಸಂಬಂಧ ಹೇಗಿದೆ?
- ನಿಮ್ಮ ಗ್ರಾಮ ಪಂಚಾಯತಿ ಎಷ್ಟು ಮಟ್ಟಿಗೆ ಚುರುಕಾಗಿದೆ. ಅದನ್ನು ಅತ್ಯಂತ ಸಕ್ರಿಯ, ಸಕ್ರಿಯ ಮತ್ತು ಅಷ್ಟು ಸಕ್ರಿಯ ವಲ್ಲ ಎಂದು ಹೇಗೆ ನಿರ್ಧರಿಸುವಿರಿ?
- ನಿಮ್ಮ ಗ್ರಾಮದಲ್ಲಿ NGO, CSR ಕೆಲಸಮಾಡುವುದೆ? ಅವುಗಳಲ್ಲಿ ಯಾವುದು ಅದರ ಮುಖ್ಯ ಕಾರ್ಯಕ್ರಮವೇನು?

**ಸರಳೀಕರಣ ಟಿಪ್ಪಣಿ–4(ಜೀವನೋಪಾಯದ ವಿಶ್ಲೇಷಣೆ)**

- ವಿಶೇಷವಾಗಿ ಗಮನಹರಿಸಿ ಗ್ರಾಮಗಳಲ್ಲಿ ಕಡುಬಡವರ ಜೀವನೋಪಾಯ ಬಲಪಡಿಸಲು/ ಬೆಂಬಲಿಸಲು ಸಾಧ್ಯವಿರು ವಂತೆ ಈ ವರ್ಷ ಯೋಜನೆ ರೂಪಿಸಲು, ಪ್ರಸ್ತುತ ಗ್ರಾಮಸ್ಥರ ಜೀವನೋಪಾಯ, ಈ ಜೀವನೋಪಾಯದ ಮೂಲಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು
- ಜೀವನೋಪಾಯದ ಮೂಲಗಳನ್ನು ವೃದ್ಧಿಸುವಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯ ಪಾತ್ರ ತಿಳಿದಿದೆಯೆ?
- ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಅಡಿ ತೆಗೆದುಕೊಂಡ ವಿವಿಧ ಕಾಮಗಾರಿ ನಮ್ಮ ಜೀವನೋ ಪಾಯ (ಕೃಷಿ, ಹೈನುಗಾರಿಕೆ ಮತ್ತು NFPTಇತ್ಯಾದಿ) ವೃದ್ಧಿಗೆ ಎಷ್ಟರಮಟ್ಟಿಗೆ ಸಹಕರಿಸಿದೆ. ವಿವಿಧ ಕಾರ್ಯ/INRM ಕ್ರಮಗಳು ಪ್ರಕೃತಿ ಮೂಲವನ್ನು ಹೇಗೆ ಬಲಪಡಿಸುತ್ತದೆ ಎಂಬ ಬಗ್ಗೆ ಚರ್ಚಿಸುವಿರಾ?
- ಫೋಟೋಗಳನ್ನು ಬಳಸಿ ಅಥವಾ ವಿಡಿಯೋ ಪ್ರದರ್ಶನದ ಮೂಲಕ ಕಂದಾಯ ಗ್ರಾಮಗಳಲ್ಲಿ ನೊಂದಿರುವ ಗ್ರಾಮಸ್ಥ ರಿಗೆ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಮೂಲಕ ಜೀವನಮಟ್ಟ ಮತ್ತು ನೈಸರ್ಗಿಕ ಸಂಪನ್ಮೂಲ ವ್ಯವಸ್ಥೆ ಅಭಿವೃದ್ಧಿ ಪಡಿಸುವುದು ಮತ್ತು ವೈಯಕ್ತಿಕ ಯೋಜನೆ ಸೇರಿಸುವುದು.

**A ಜೀವನೋಪಾಯ ಅಭಿವೃದ್ಧಿಗಾಗಿ ವಿವಿಧ ಸಂಪನ್ಮೂಲ ಮತ್ತು ವಿಷಯಗಳನ್ನು ಅರ್ಥಮಾಡಿಕೊಳ್ಳುವುದು ಎರಡನೇ ಟಿಪ್ಪಣಿಯನ್ನು ಗಮನಿಸಿ:**

| ಲೆಕ್ಕ ಶೀರ್ಷಿಕೆ | ಕಂದಾಯಗ್ರಾಮ/ ಗ್ರಾಮದ ವಿವಿಧ ಜೀವನೋಪಾಯ ದ ಪಟ್ಟಿ | ಗ್ರಾಮಕ್ಕೆ ಆ ಸಂಪನ್ಮೂಲ ಗಳ ಪ್ರಾಮುಖ್ಯತೆ (ಚಪ್ಪತ್ತಿ ಶ್ರೇಣಿ) | ಈ ಜೀವನೋಪಾ ಯವಿರುವ ಮನೆ ಗಳ ಅಂದಾಜು ಶತಾಂಶ (10ಅಂಶ ಗಳು) | ಪ್ರತಿ ಕುಟುಂಬ ದ ಅಂದಾಜು ವಾರ್ಷಿಕ ವರ ಮಾನ | ದೌರ್ಬಲ್ಯದ ಪ್ರಮಾಣ | ಈ ಮೂಲಕ್ಕೆ ಹಿಂತಿ ರುಗುವ ಸಂಭವ |
|---|---|---|---|---|---|---|
| ಪ್ರಮುಖ ಪ್ರಶ್ನೆಗಳು | ಗ್ರಾಮದ ವಿವಿಧ ಸಂಪಾದನೆಯ ಮೂಲಗಳಾವುವು? | ಗ್ರಾಮದ ಅರ್ಥವ್ಯವಸ್ಥೆ ಅವರ ಜೀವನೋಪಾ ಯದ ಕೊಡುಗೆ/ಪ್ರಾಮು ಖ್ಯತೆ | 10 ಮನೆಗಳ ಪೈಕಿ ಎಷ್ಟು ಮನೆಗಳಲ್ಲಿ ಈ ಜೀವನೋಪಾ ಯ ಇದೆ. | ಪ್ರತಿವರ್ಷ ಪ್ರತಿ ಕುಟುಂಬಗಳಿ ಸುವ ಅಂದಾ ಜು ವರಮಾನ | ಕಳೆದ 5–6 ವರ್ಷ ಗಳಲ್ಲಿ ಸಂಪಾದನೆ ಏರಿಳಿತ ಇರುತ್ತದೆ (ಹೆಚ್ಚು, ಮಧ್ಯಮ ಮತ್ತು ಕಡಿಮೆ) | ಈ ಮನೆಗಳಲ್ಲಿ ಯಾವುದರಲ್ಲಿ ಹೆಚ್ಚಾ ಗುತ್ತಿದೆ, ಕಡಿಮೆಯಾ ಗುತ್ತಿದೆ ಅಥವಾ ಯಥಾಸ್ಥಿತಿಇರುತ್ತದೆ. |
| ಜೀವ ನೋಪಾ ಯದ ಪಟ್ಟಿ | 1 | | | | | |
| | 2 | | | | | |
| | 3 | | | | | |
| | 4 | | | | | |
| | .. | | | | | |

**B ದುರ್ಬಲ ಕುಟುಂಬಗಳ ಜೀವನೋಪಾಯ:**

ಈ ಕ್ರಮಗಳನ್ನು ಸಂಪೂರ್ಣ ಗ್ರಾಮಕ್ಕಾಗಿ ಮಾಡಲಾಗಿದೆ. ಬಡವರು ಮತ್ತು ದುರ್ಬಲರ ಪರಿಸ್ಥಿತಿ ಬಗ್ಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸು ವುದು.

- ಎಷ್ಟು ಕುಟುಂಬಗಳಲ್ಲಿ ಭೂ ಹೀನರು ಮತ್ತು ಕಡಿಮೆ ಭೂಮಿ ಹೊಂದಿರುವವರ ಶತಾಂಶವೆಷ್ಟು?
- ಅವರ ಜೀವನೋಪಾಯಕ್ಕೆ ಮುಖ್ಯ ಸಂಪನ್ಮೂಲ ಯಾವುದು? ಅವರು ಹೇಗೆ ಜೀವನಮಾಡುತ್ತಿದ್ದಾರೆ?
- ಮೇಲಿನ ವಿಷಯ ಜೊತೆಗೆ ಹೆಚ್ಚಿನ ಸಮಸ್ಯೆಗಳಲ್ಲದೇ ಯಾವುದಾದರೂ ಒಂದು ವಿಶಿಷ್ಟ ಸಮಸ್ಯೆ ಈ ಕುಟುಂಬಗಳು ಎದುರಿಸುತ್ತಿರುವುದೇ?
- ಈ ಸಮಸ್ಯೆಗಳಿಗೆ ಇರುವ ಸಾಧ್ಯವಿರುವ ಪರಿಹಾರಗಳೇನು?(ಇದನ್ನು ಗಮನಿಸಿ)

**ಸರಳೀಕರಣ ಟಿಪ್ಪಣಿ–5 (ಸಂಪನ್ಮೂಲದ ನಕ್ಷೆ ಮತ್ತು ಅದನ್ನು ಗುರ್ತಿಸುವುದು)**

ನಾವು ಈಗ ಗ್ರಾಮಜೀವನದ ವಿವಿಧಸಮಸ್ಯೆ ಅರ್ಥಮಾಡಿಕೊಂಡಿರುತ್ತೇವೆ, ಗ್ರಾಮದ ಪ್ರಾಕೃತಿಕಸಂಪನ್ಮೂಲಗಳನ್ನು ಅರ್ಥಮಾಡಿ ಕೊಂಡು ಅವುಗಳನ್ನು ಅಭಿವೃದ್ಧಿಪಡಿಸಿ ಜೀವನೋಪಾಯ ಬಲಪಡಿಸುದು. ಈ ಎಲ್ಲಾ ವಿಷಯಗಳ ಸಮಗ್ರಚಿತ್ರಣ ತಯಾರಿಸ ಬೇಕು. ಈ ಬಗ್ಗೆ ಈ ಹಿಂದೆ ಸಂಪನ್ಮೂಲಗಳನಕ್ಷೆ ತಯಾರಿಸಿದ್ದೀರಾ? ಹಾಗಿದ್ದಲ್ಲಿ ತೋರಿಸಿ ಅಥವಾ ತಯಾರಿಸಲು ಪ್ರಯತ್ನಿಸೋಣ.
(ಸಂಪನ್ಮೂಲ ನಕ್ಷೆಯಲ್ಲಿ ವಿವಿಧರೀತಿಯ ಭೂಮಿ, ನೀರಿನ ಮೂಲಗಳು, ಅಂಚಿನ ಗೆರೆಗಳು, ಚರಂಡಿನೀರಿನ ಮಾರ್ಗ ಮತ್ತು ನೀರು ಹರಿಯುವ ದಿಕ್ಕು.)

- ನಿಮ್ಮ BPT ಮೂಲದಿಂದ ಗುರ್ತಿಸಿದ ಗ್ರಾಮದ ಸಂಪನ್ಮೂಲದ ನಕ್ಷೆ ಗಳನ್ನು ಸೇರಿಸುವುದು.

| **ಜೀವನೋಪಾಯಕ್ಕೆ ಸಂಪನ್ಮೂಲಗಳು** | **ಸವಾಲುಗಳು/ ಸಮಸ್ಯೆಗಳು** | **ಈ ಸಮಸ್ಯೆ ಬಗೆಹರಿ ಸಲು ಸಾಧ್ಯವಿರುವ** | **ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಅಡಿ ಯಾವ ಕೆಲಸ ನೀಡಬಹುದು** | **ಇದರಿಂದ ಆಗುವ ಲಾಭವೇನು?** |
|---|---|---|---|---|
| | | | | |
| | | | | |
| | | | | |
| | | | | |
| | | | | |

- ನಕ್ಷೆಯಲ್ಲಿ ನಾಲೆ/ಮುಖ್ಯ ಚರಂಡಿಗಳನ್ನು ಗುರ್ತಿಸುವುದು. ರಸ್ತೆ ಮತ್ತು ಕೆಲವು ಸಾಮಾನ್ಯ ಮೂಲ ಸೌಲಭ್ಯಗಳಾದ ಶಾಲೆ, ಗುಡಿ ಇತ್ಯಾದಿ. ಇದರಿಂದ ನಕ್ಷೆ ತಯಾರಿಸಲು ಸುಲಭವಾಗುತ್ತದೆ.
- ಆಯ್ಕೆಮಾಡಿದ ಗ್ರಾಮಸ್ಥರ ಸಹಾಯದಿಂದ ಗ್ರಾಮದ ನಕ್ಷೆಯಲ್ಲಿ ಚರಂಡಿ ಗೆರೆಗಳ ಚಿತ್ರಣ ನೀಡುವುದು. ಇದರಿಂದ ಸಂಪನ್ಮೂಲದ ನಕ್ಷೆ ಬರೆಯಲು ಸಹಾಯವಾಗುತ್ತದೆ.
- ಸಮುದಾಯದ ಜನರನ್ನು ವಿಚಾರಿಸಿ ಅವರು ಹೇಗೆ ಭೂಮಿಯನ್ನು ವರ್ಗೀಕರಿಸುತ್ತಾರೆ. ಅದರಂತೆ ವಿವಿಧ ಭೂಮಿಗಳ ನ್ನು ವಿವಿಧ ಬಣ್ಣದಿಂದ ಗುರ್ತಿಸಿ, ಉದಾಹರಣೆಗೆ ಕೆಳಮಟ್ಟದ ಭೂಮಿಯನ್ನು ಹಸಿರುಬಣ್ಣದಲ್ಲಿ. ಯಾವಬಣ್ಣ ಯಾವ ಜಮೀನಿಗೆ ನೀಡಲಾಗಿದೆ ಎಂಬ ಬಗ್ಗೆ ನಕ್ಷೆ ಕೆಳಗೆ ಸೂಚಿಸುವುದು.
- ಭೂಪಟದಲ್ಲಿ ಸ್ಥಳೀಯ ಭೂಮಿಗಳನ್ನು ವೃತ್ತಾಕಾರದಿಂದ ಗುರ್ತಿಸಿ ಬಣ್ಣಹಾಕಿ ಅವುಗಳ ಹೆಸರನ್ನು ಸೂಚಿಸಿ.
- ಭೂಮಿಯನ್ನು ಹೊಂದಿರುವವರ ವೈವಿಧ್ಯ? ಭೂಹೀನರು (ಶತಾಂಶ) ಸಣ್ಣ ಮತ್ತು ಅತಿಸಣ್ಣ ರೈತರು (ಶತಾಂಶ) ಮತ್ತು ಇತರರು (ಶತಾಂಶ) ಎಷ್ಟು?
- ಕಂದಾಯ ಗ್ರಾಮದಲ್ಲಿ ಈಗ ಬಳಸಿರುವ ಪ್ರಾಕೃತಿಕ ಸಂಪನ್ಮೂಲವೆಷ್ಟು?
- ಮಳೆ ನೀರನ್ನು ಸೂಕ್ತವಾಗಿ ಬಳಸಿಕೊಳ್ಳಲಾಗಿದೆಯೇ? ವರ್ಷಾನುಗಟ್ಟಲೆ ಬಳಸಿರುವುದರಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿರುವುದೇ?
- ವಿವಿಧ ಭೂಮಿಗಳಿಗೆ ವಿವಿಧ ಹೆಸರನ್ನು ನೀಡಲಾಗಿದೆ? ಹೌದಾದರೆ ಎಷ್ಟು ವಿಧದ ಭೂಮಿಗಳಿವೆ?
- ಗುರ್ತಿಸಿದ ಭೂ ಪ್ರದೇಶದಲ್ಲಿ ಇರುವ ಮಾಲೀಕತ್ವ ವೈವಿಧ್ಯತೆ ಪರಿಶೀಲಿಸಿ. ಅವುಗಳಲ್ಲಿ ತೀರಾ ಬಡವರು ಜಮೀನು ಹೊಂದಿರುವರೆ?
- ಆ ಭೂ ಪ್ರದೇಶಗಳನ್ನು ಗುರ್ತಿಸಿ ಬಣ್ಣದಿಂದ ತುಂಬಿರಿ.
- ಈ ಭೂ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಗಳು ಏನು? ಅಂದರೆ ಭೂ ಸವೆತ, ಒಂದು ಕಾಲಮಾನದ ಬೆಳೆ, ಮರಳಿನ ಸಂಗ್ರಹ ಮತ್ತು ಬೆಳೆಗಳ ವೈಫಲ್ಯ ಇತ್ಯಾದಿ.
- ಅತಿ ಹೆಚ್ಚು ಸಮಸ್ಯೆ ಇರುವ ಮತ್ತು ದುರ್ಬಲ ವರ್ಗದ ಜನರನ್ನು ಗುರ್ತಿಸುವಂತೆ ಗ್ರಾಮಸ್ಥರಿಗೆ ತಿಳಿಸುವುದು. ಆದ್ಯತೆ ಮೇರೆಗೆ ಅಂತಹ ಕುಟುಂಬಗಳನ್ನು ಗುರ್ತಿಸುವುದು. ಆದರೆ ಈ ವರ್ಷ ಈ ಬಗ್ಗೆ ಯಾವಕ್ರಮತೆಗೆದುಕೊಳ್ಳಲು ಸಾಧ್ಯ ವಿಲ್ಲ. ಅಭಿವೃದ್ಧಿಗೆ ಕೆಲವು ಭೂ ಪ್ರದೇಶಗಳನ್ನು ಗುರ್ತಿಸೋಣ (1, 2 ಮತ್ತು 3).

- ನಾಳೆ ಬೆಳಿಗ್ಗೆಯೇ ಆ ಭೂಮಿಗೆ ಭೇಟಿ ನೀಡಿ, ಅವುಗಳ ಮಾಲೀಕರನ್ನು ಗುರ್ತಿಸಿ ಅವರು ಯೋಜನಾ ತಂಡದ ಸದಸ್ಯರೊಂದಿಗೆ ಸೇರಲು ಹೇಳುವುದು.

**ಸರಳೀಕರಣ ಟಿಪ್ಪಣಿ–6 (ಗುರ್ತಿಸಿದ ಭೂಮಿಯಲ್ಲಿ ಅಡ್ಡ ನಡಿಗೆ)**

- ಈ ಅಡ್ಡನಡಿಗೆಯ ಮೂಲ ಉದ್ದೇಶವೇನು?
- ಇಲ್ಲಿ ಯಾರು ಜಮೀನು ಹೊಂದಿದ್ದಾರೆ? ಅದರ ಗಾತ್ರವೇನು? ಇದರಲ್ಲಿ ಕೆಲವು ರೈತರು ದೊಡ್ಡ ಜಮೀನು ಹೊಂದಿರುವರೆ?
- ಈ ಪ್ರದೇಶದ ಜಮೀನಿನಲ್ಲಿ ಬೆಳೆಯುವ ವಿವಿಧ ರೀತಿಯ ಬೆಳೆಗಳು ಯಾವುವು?
- ಈ ಭಾಗದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಯಾವುವು (ಅಂದರೆ ಮಳೆ ನೀರು ಕೊಯ್ಲು)?
- ಮಳೆನೀರು ಈ ಜಮೀನಿನ ಯಾವದಿಕ್ಕಿನಲ್ಲಿ ಹರಿಯುವುದು? ಆ ಭಾಗದಲ್ಲೂ ಮಣ್ಣಿನ ಸವಕಳಿಸಮಸ್ಯೆ ಇರುವುದೇ?
- ಈ ಭಾಗದಲ್ಲಿ ಸಾಕಷ್ಟು ನೀರು ವ್ಯವಸಾಯಕ್ಕೆ ಒದಗಿಸಲು ಮಳೆ ನೀರಿನ ಕೊಯ್ಲು ಸಾಕಾಗುವುದೇ? ಈ ಭಾಗದಲ್ಲಿ ಮಣ್ಣಿನ ಸವಕಳಿ ಇದ್ದಲ್ಲಿ ಅದನ್ನು ಸರಿಪಡಿಸಲಾಗಿದೆಯೇ?
- ತೋಡಿದ ಬಾವಿಯಿಂದ ಮಳೆ ನೀರಿನಕೊಯ್ಲಿಗೆ ಸಹಾಯವಾಗಿದೆಯೇ? ಸಣ್ಣ ರೈತರ ವ್ಯವಸಾಯಕ್ಕೆ ದೊಡ್ಡ ಕೊಳ ಸಹಾಯಕವಾಗಿದೆಯೇ? ಹಾಗಿದ್ದಲ್ಲಿ ಜಮೀನಿನಲ್ಲಿ ನೀರು ಹೇಗೆ ನಿಲ್ಲಿಸಲಾಗಿದೆ.
- ಸಣ್ಣ ಯೋಜನೆಗಳಿಂದ/ಪ್ರಾಜೆಕ್ಟ್‌ಗಳಿಂದ (ಅಂದರೆ ಹೊಲದ ಕೊಳ, ಭೂಮಿ ಸಮತಟ್ಟು, ದಂಡೆ ನಿರ್ಮಿಸುವುದು ಇತ್ಯಾದಿ) ಮಣ್ಣಿನ ಗುಣ ಮತ್ತು ಬೆಳೆಗಳ ಇಳುವರಿ ಪರಿಣಾಮಕಾರಿಯಾಗಿ ಹೆಚ್ಚಿಸಲಾಗಿದೆಯೇ?]
- ಒಂದೆರಡು ರೈತರಿಗೆ ಈ ಯೋಜನೆಗೆ ಸಹಾಯಮಾಡಿದಲ್ಲಿ ಈ ಪ್ರದೇಶದ ಎಲ್ಲಾ ಕುಟುಂಬಗಳಿಗೆ ಸಹಾಯವಾಗು ವುದೇ? ಹಾಗಿಲ್ಲದಿದ್ದಲ್ಲಿ ಈ ಪ್ರದೇಶದಲ್ಲಿ ಮಾಡಿದ ಈ ಸಣ್ಣಯೋಜನೆಗಳು ಮಳೆನೀರಿನಕೊಯ್ಲಿಗೆ ಸಾಕಾಗುವುದೇ?
- ಭೂ ಮಾಲೀಕರ ಹೆಸರು, ಅವರು ಹೊಂದಿರುವ ಜಮೀನಿನ ಪ್ರಮಾಣ ಮತ್ತು ಆ ಜಮೀನಿನ ಅಭಿವೃದ್ಧಿಗೆ ನೀಡಿದ ಸಲಹೆ.

**ಸರಳೀಕರಣ ಟಿಪ್ಪಣಿ–7 (ಗುರ್ತಿಸಿದ ಭೂಮಿಯಲ್ಲಿ ಅಡ್ಡ ನಡಿಗೆ)**

**ಧನ್ಯವಾದಗಳು:**
**ನಾನು ನರೇಗಾ ಕಛೇರಿಯಲ್ಲಿದ್ದು ಇಲ್ಲಿ ನಡೆಯುವ ವಿವಿಧ ಚಟುವಟಿಕೆಗಳಿಂದ ಮತ್ತು ನಿಮ್ಮ ಭಾಗವಹಿಸುವಿಕೆಯಿಂದ ಹೇಗೆ ಜೀವನೋಪಾಯ ಜನರಿಗೆ ನೀಡುವಿರಿ ಎಂದು ಅರ್ಥಮಾಡಿಕೊಂಡಿದ್ದೇನೆ. ನರೇಗಾ ಯೋಜನೆಯಿಂದ ವಿವಿಧ ಭಾಗಗಳು ಪಡೆಯುವ ಸಹಾಯದ ಬಗ್ಗೆ ತಿಳಿಯಲು ನನಗೆ ಆಸಕ್ತಿಯಿದೆ.**

- ನಿಮ್ಮ ಕುಟುಂಬದ ಬಗ್ಗೆ ಏನಾದರೂ ತಿಳಿಸಿರಿ. ಎಷ್ಟು ಜನರಿದ್ದೀರಿ, ಅದರಲ್ಲಿ ದುಡಿಯುವ ಸದಸ್ಯರೆಷ್ಟು? ಅವ ಲಂಬಿತ ಸದಸ್ಯರೆಷ್ಟು?
- ನಿಮ್ಮ ಗ್ರಾಮದಲ್ಲಿ ನಡೆಯುವ ಯೋಜನಾ ಸಭೆಗಳಲ್ಲಿ ನೀವು ಭಾಗವಹಿಸುತ್ತಿದ್ದೀರಾ? (ಗುರುತು ಹಾಕಿ) ಸರಿ/ತಪ್ಪು.
- ಹೌದಾದರೆ, ಸಭೆಯಲ್ಲಿ ಜೀವನೋಪಾಯಕ್ಕಾಗಿ ಆಸ್ತಿಗಳಿಗೆ ಏನಾದರೂ ಬೇಡಿಕೆ ಇಟ್ಟಿರುವಿರಾ?(ಗುರುತು ಹಾಕಿ) ಸರಿ/ತಪ್ಪು.
- ಹೌದಾದರೆ ಅವು ಯಾವುವು?

- **ಜೀವನೋಪಾಯದ ವಿವಿಧ ಸಂಪನ್ಮೂಲಗಳು ಯಾವುವು?**

| ಪ್ರಾಥಮಿಕ ವೃತ್ತಿ (ಕೋಡ್) | ಬದಲಿ ವೃತ್ತಿ–1 (ಕೋಡ್) | ಬದಲಿ ವೃತ್ತಿ–2 (ಕೋಡ್) | ಬದಲಿ ವೃತ್ತಿ–3 (ಕೋಡ್) |
|---|---|---|---|
| | | | |

ವೃತ್ತಿಕೋಡ್‌ಗಳು 1. ಕೃಷಿ, 2. ಹೈನುಗಾರಿಕೆ ಮತ್ತು 3. ಇತರ

**1. ಕೃಷಿಗೆ ಸಂಬಂಧಿಸಿದ ಅವಕಾಶಗಳು**

- ನಿಮ್ಮ ಸ್ಥಳೀಯ ಅಳತೆಯಲ್ಲಿ ವಿವಿಧ ಜಮೀನು ಮಾದರಿಗಳಾದ ಕೆಳಗಿನ, ಮಧ್ಯಮ ಮತ್ತು ಮೇಲಿನ ಜಮೀನು, ಮನೆ ಬಳಿಯ ಮತ್ತು ಅನುಪಯೋಗಿ ಜಮೀನು ಇವುಗಳನ್ನು ಹಂಚಿಕೊಳ್ಳುವಿರಾ?
- ನೀವು ಉಪಯೋಗಿಸುವ ಸ್ಥಳೀಯ ಅಳತೆ ಯಾವುದು?
- ಜಮೀನಿನ ಎಷ್ಟು ಭಾಗದಲ್ಲಿ ವ್ಯವಸಾಯದಲ್ಲಿದೆ ಅಂದರೆ ಕಡೇ ಪಕ್ಷ ಎರಡು ಬೆಳೆ ತೆಗೆಯುವುದು.

| ಜಮೀನಿನ ಅಳತೆ (ಎಕರೆಗಳಲ್ಲಿ | ಇಳಿಜಾರು ಭೂಮಿ | ಸಮತಟ್ಟು ಭೂಮಿ | ಎತ್ತರದ ಭೂಮಿ | ಮನೆಯ ಬಳಿಯ ಭೂಮಿ | ಕೃಷಿಯೇತರ |
|---|---|---|---|---|---|
| ಕೃಷಿಗೆಬಳಸಿದೆ (ಕನಿಷ್ಠ ಜನವರಿ ವರೆಗೆ) | | | | | |
| ಕೃಷಿಯೇತರ | | | | | |
| ಗುತ್ತಿಗೆ/ಸರ್ಕಾರಿ ಜಮೀನು | | | | | |

- ಮೇಲ್ಕಂಡ ಜಮೀನಿನಲ್ಲಿ ಯಾವ ಬೆಳೆಗಳನ್ನು ನೀವು ಬೆಳೆಯುವಿರಿ?
- ವ್ಯವಸಾಯದಲ್ಲಿ ಬರುವ ಸಮಸ್ಯೆಗಳೇನು?

| ಕ್ರ.ಸಂ. | ಮುಖ್ಯ ಪ್ರಶ್ನೆಗಳು | ಹೌದು | ಇಲ್ಲ |
|---|---|---|---|
| 1 | ಜಮೀನು ಅಭಿವೃದ್ಧಿಮಾಡಲು ನಿಮ್ಮ ಕುಟುಂಬ ಒಪ್ಪುವುದೇ? | | |
| | ಹೊಲದ ಬದು | | |
| | ಜಮೀನಿನ ಸಮತಟ್ಟು | | |
| | ಅಂಕುಡೊಂಕಾದ ಕಂದಕ | | |
| | 30X40 ಮಾದರಿ | | |
| | ಇತರೆ (ಸೂಚಿಸಿ) | | |
| 2 | ವ್ಯಕ್ತಿಗತ ವ್ಯವಸಾಯದ ಆಸ್ತಿಗಳು ಬೇಕಾಗಿದೆ(ಉದಾಹರಣೆ ಹೊಲದ ಕೊಳ, ತೋಡಿದ ಬಾವಿ ಇತ್ಯಾದಿ | | |
| | ತೋಟದ ಕೊಳ | | |
| | ತೋಡಿದ ಬಾವಿ | | |
| 3 | ಎ. ನಿಮ್ಮ ಕುಟುಂಬ ತೋಟದ ಬೆಳೆ ತೆಗೆಯುವುದೇ? | | |
| | ಬಿ. ಅವಕಾಶ ಸಿಕ್ಕರೆ ಗುತ್ತಿಗೆ ಜಮೀನಿನಲ್ಲಿ ನಿಮ್ಮ ಕುಟುಂಬ ತೋಟದ ಬೆಳೆ ತೆಗೆಯಲು ಆಸಕ್ತ ವಾಗಿದೆಯೇ? | | |
| 4 | ಬದು ನೆಡು ತೋಪು ಬೆಳೆಸಲು ನಿಮ್ಮ ಕುಟುಂಬ ಒಪ್ಪುವುದೇ? | | |
| 5 | ಮಣ್ಣಿನ ಫಲವತ್ತತೆವ್ಯವಸ್ಥೆಯಲ್ಲಿ NADEP ಕಾಂಪೋಸ್ಟ್ ಗುಂಡಿನಿರ್ಮಿಸಲು ನಿಮ್ಮಕುಟುಂಬ ಸಿದ್ಧವಿದೆಯೆ? | | |
| 6 | ಇತರ (ನಿರ್ದಿಷ್ಟಪಡಿಸಿ) | | |

**2 ಜಾನುವಾರಿಗೆ ಸಂಬಂಧಿಸಿದ ಅವಕಾಶಗಳು:**

ಯಾವ ರೀತಿಯ ಜಾನುವಾರು ಇಟ್ಟಿರುವಿರಿ? ಅವುಗಳ ಸಂಖ್ಯೆ ತಿಳಿಸುವಿರಾ? ಅವುಗಳಲ್ಲಿ ದೊಡ್ಡವು ಮತ್ತು ಕರುಗಳ ಸಂಖ್ಯೆ ಪ್ರತ್ಯೇಕವಾಗಿ ತಿಳಿಸಿರಿ?

| ಪ್ರಾಣಿಗಳ ಸಂಖ್ಯೆ | ಎಮ್ಮೆ | ಎತ್ತುಗಳು | ಹಸುಗಳು | ಮೇಕೆ/ಕುರಿ | ಹಂದಿಗಳು | ಕೋಳಿ |
|---|---|---|---|---|---|---|
| ದೊಡ್ಡವು | | | | | | |
| ಕರು/ಮರಿಗಳು | | | | | | |

| ಕ್ರ.ಸಂ. | ಮುಖ್ಯ ಪ್ರಶ್ನೆಗಳು | ಹೌದು | ಇಲ್ಲ |
|---|---|---|---|
| 1 | ನಿಮ್ಮ ಕುಟುಂಬ ಪ್ರಾಣಿಗಳಿಗೆ ಆಶ್ರಯ ನೀಡಿರುವುದೇ | | |
| | ದನದ ಕೊಟ್ಟಿಗೆ | | |
| | ಮೇಕೆ/ಕುರಿ ದೊಡ್ಡಿ | | |
| | ಕೋಳಿಗಳ ಷೆಡ್ | | |
| | ಇತರೆ(ನಿರ್ದಿಷ್ಟಪಡಿಸಿ) | | |

1. ಅರಣ್ಯ ಜೀವನೋಪಾಯಕ್ಕೆ ಸಂಬಂಧಿಸಿದ್ದು.(NTFP) (ಗ್ರಾಮಗಳು ಅರಣ್ಯದ ಸಮೀಪದಲ್ಲಿದ್ದಾಗ)

| ಕ್ರ.ಸಂ. | ಮುಖ್ಯ ಪ್ರಶ್ನೆಗಳು | ಹೌದು | ಇಲ್ಲ |
|---|---|---|---|
| 1 | ನಿಮ್ಮ ಕುಟುಂಬ ಅರಣ್ಯ ಸಾಗುವನೆಕಾರ್ಯದಲ್ಲಿ ತೊಡಗಿತ್ತೆ? ಅಥವಾ ಈ ಚಟುವಟಿಕೆಗಳಲ್ಲಿ ತೊಡಗಿರುವುದೇ? | | |
| | ತಸಾರ್ | | |
| | ಅರಗು | | |
| | ಇತರೆ | | |
| 2 | NTFPಗೆ ಸಂಬಂಧಿಸಿದಂತೆ ಒಂದುಘಟಕದ ತೋಟಗಾರಿಕೆ ಕೆಲಸ ತೆಗೆದುಕೊಳ್ಳಲು ಇಚ್ಛಿಸುವಿರಾ? | | |
| | ಹೌದಾದಲ್ಲಿ ಅದು ಯಾವುದು? | | |

ಮೇಲ್ಕಂಡ ಚಟುವಟಿಕೆಗಳಲ್ಲಿ ಯಾವುದನ್ನು ಮಹಾತ್ಮಗಾಂಧೀ ಗ್ರಾಮೀಣ ಉದ್ಯೋಗ ಖಾತರಿಯೋಜನೆಯ ಅಡಿ ತರುವುದಕ್ಕೆ ಆದ್ಯತೆ ನೀಡುತ್ತದೆ?

**ಸರಳೀಕರಣ ಟಿಪ್ಪಣಿ–8 (ಕಂದಾಯ ಗ್ರಾಮದ ಹಂತದ ಸಭೆಯಲ್ಲಿ ಕಾಮಗಾರಿಗಳಿಗೆ ಆದ್ಯತೆ)**

**ಹೇಗೆ?**

- ಗುರ್ತಿಸಿದ ಯೋಜನಾ ಚಟುವಟಿಕೆ/ಕಾಮಗಾರಿಗಳನ್ನು ಮತ್ತು ಕಾರ್ಮಿಕ ಆಯವ್ಯಯ ಸಲ್ಲಿಸಿ.
- ಗ್ರಾಮಸ್ಥರ ಅಗತ್ಯಕ್ಕೆ ಮತ್ತು ಕಾರ್ಮಿಕ ಆಯವ್ಯಯದಂತೆ ಕಾಮಗಾರಿಗಳಿಗೆ ಆದ್ಯತೆ ನೀಡುವುದು.
- ಕಡು ಬಡವರಿಗೆ ಆದ್ಯತೆ ಸಿಗುವಂತಹ ಯೋಜನೆಗಳಿಗೆ ಮತ್ತು ಋತುಮಾನ ಕಾಲಮಾನ ನಕ್ಷೆಯಲ್ಲಿ ಗುರ್ತಿಸಿದಂತೆ ಆದ್ಯತೆ ನೀಡುವುದು.
- ಹಿಂದಿನ ವರ್ಷಗಳಲ್ಲಿ ಆಯ್ಕೆಮಾಡಿದ, ಮುಂದೆ/ ಮತ್ತೆ ಅವಕಾಶಪಡೆಯದಂತೆ ಅಥವಾ ಕಾಮಗಾರಿ ಪ್ರಾರಂಭಿಸದ ಅಥವಾ ಬೇಕಾಗಿಲ್ಲದ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಬೇಕು.

**ಚರ್ಚಿಸಬೇಕಾದ ಅಂಶಗಳು:**

- ಸಾಮಾಜಿಕ ನಕ್ಷೆಯಲ್ಲಿ ಸೃಜಿಸಿದ ಎಲ್ಲ ಕಾಮಗಾರಿಗಳ, ಜೀವನೋಪಾಯದ ವಿಶ್ಲೇಷಣೆ, ಸಂಪನ್ಮೂಲಗಳ ನಕ್ಷೆ, ಭೂ ಭಾಗಗಳ ಭೇಟಿ ಮತ್ತು ವೈಯಕ್ತಿಕ ಮನೆಗಳ ಯೋಜನೆಗಳ ಪಟ್ಟಿಮಾಡಿ.

- ಯೋಜನಾ ಸಮಿತಿಯೊಂದಿಗೆ ಚರ್ಚಿಸಿ ಮೇಲ್ಕಂಡ ಎರಡುವಿಧಗಳಿಗೆ ಆದ್ಯತೆ, ಅಂದರೆ ಒಂದು ವೈಯಕ್ತಿಕ ಕಾಮಗಾರಿ ಮತ್ತು ಇನ್ನೊಂದು ಎಲ್ಲರ ಕಾಮಗಾರಿಗಳಿಗೆ ಆದ್ಯತೆ ನೀಡುವುದು.
- ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಗೆ ಆಯ್ಕೆ ಮಾಡಿದ ಯೋಜನೆಗಳ/ ಕಾಮಗಾರಿಗಳ ಬಗ್ಗೆ ಕಳೆದ 3 ದಿನಗಳಲ್ಲಿ ಕಂದಾಯಗ್ರಾಮದ ಮನೆಗಳು ಕೆಲಸದಲ್ಲಿ ಆಸಕ್ತಿವಹಿಸಿದ ಕೆಲಸದಲ್ಲಿ ಯೋಜನಾ ಕಾರ್ಯ. ನಂತರ ಆದ್ಯತೆ ಪಡೆದ ಕಾಮಗಾರಿಗಳ ಪಟ್ಟಿಯನ್ನು ಕಾರ್ಮಿಕ ಆಯವ್ಯಯವನ್ನು ಈ ಕೆಳಕಂಡ ಅಂಶಗಳ ಚರ್ಚೆಯಿಂದ ಅಂತಿಮಗೊಳಿಸುವುದು.
- ಕಂದಾಯ ಗ್ರಾಮಗಳ ಪ್ರಾಕೃತಿಕಾ ಸಂಪನ್ಮೂಲಗಳಿಂದ ಕುಟುಂಬಗಳ ಜೀವನೋಪಾಯ ಹೆಚ್ಚಿಸಲು ಯಾವ ಕಾಮಗಾರಿ ಆಯ್ಕೆಮಾಡಿ ಯೋಜನಾ ಕಾರ್ಯಕ್ಕೆ ಕಳೆದ 3 ದಿನಗಳಲ್ಲಿ ಮುಖ್ಯವಾಗಿದೆ.
- ಅವುಗಳಲ್ಲಿ ಯಾವುದನ್ನು ಮೊದಲು ಕಾರ್ಯಗತಗೊಳಿಸಬೇಕು.
- ಕಂದಾಯ ಗ್ರಾಮದ ಜನರು ಆಯ್ಕೆಮಾಡಿದ ಪಟ್ಟಿಯಲ್ಲಿರುವ ಯಾವ ಕಾಮಗಾರಿಗೆ ಆದ್ಯತೆ ನೀಡುತ್ತಾರೆ.
- ಈ ಆಯ್ಕೆಗಳಲ್ಲದೆ ಬೇರೆ ಕಾಮಗಾರಿಗಳ ಬಗ್ಗೆ ಚರ್ಚಿಸುವಿರಾ?
- ಗ್ರಾಮಸ್ಥರ ಮುಂದೆ ಕಂದಾಯಗ್ರಾಮಕ್ಕಾಗಿ ಅನುಮೋದಿಸಿದ ಅಥವಾ ಅನುಷ್ಠಾನಗೊಳಿಸಿದ ಯೋಜನೆ/ಕಾಮಗಾರಿಗಳ ಪಟ್ಟಿ ನೀಡಿ. ಈ ಅನುಮೋದಿತ ಯೋಜನೆಗಳಲ್ಲಿ ಯಾವುದು ಅಗತ್ಯವಿಲ್ಲ ಅಥವಾ ತೆಗೆದುಹಾಕಲಾಗಿದೆಯೋ, ಅದರ ಅನುಷ್ಠಾನ ನಿಲ್ಲಿಸುವುದು ಅಗತ್ಯವೋ ಆ ಬಗ್ಗೆ ಚರ್ಚಿಸಿ. BPTಯ ಒಬ್ಬ ಸದಸ್ಯರು ಈ ಯೋಜನೆ ರದ್ದುಗೊಳಿಸಲು ಅಥವಾ ನಿಲ್ಲಿಸುವ ಬಗ್ಗೆ ಬರೆಯಬೇಕು.

**2. ಗ್ರಾಮ ಸಭೆಯಿಂದ ಭವಿಷ್ಯ–ಯೋಜನೆಯ ಅನುಮೋದನೆ:**

**ಯಾವಾಗ:**
ಗ್ರಾಮ ಪಂಚಾಯತಿಯ ಹ್ಯಾಮ್ಲೆಟ್‌ದ ಯೋಜನಾ ಕಾರ್ಯಗಳನ್ನು ಪೂರ್ಣಗೊಂಡನಂತರ.

**ಏಕೆ:**
ಯೋಜನೆ ಕಾರ್ಯಕ್ಕೆ ಆದ್ಯತೆ ನೀಡುವುದು ಮತ್ತು ಕಾರ್ಮಿಕ ಆಯವ್ಯಯವನ್ನು 2016–17ರ ಯೋಜನೆಗಾಗಿ ಅನುಮೋದಿಸಬೇಕು.

**ಹೇಗೆ:**

- ಗ್ರಾಮಪಂಚಾಯತ್ ಸರಪಂಚ ಮತ್ತು ಗ್ರಾಮ ಪ್ರಧಾನ ಇವರು ಗ್ರಾಮ ಸಭೆ ಏರ್ಪಡಿಸುತ್ತಾರೆ.
- ಗ್ರಾಮಸಭೆಯಲ್ಲಿ ಗ್ರಾಮದ ಕಾಮಗಾರಿ /ಚಟುವಟಿಕೆಗಳ ಪಟ್ಟಿಯನ್ನು ಪ್ರತಿ ಹ್ಯಾಮ್ಲೆಟ್ ಗಳಲ್ಲಿ ಆದ್ಯತೆ ಮೇಲೆ ಪಟ್ಟಿಮಾಡಬೇಕು. ಗ್ರಾಮದ ಪರಿಸ್ಥಿತಿ ಮೇಲೆ ಗ್ರಾಮಸಭಾ ಬದಲಾವಣೆ ಮಾಡಬಹುದು.
- ಗ್ರಾಮಸಭೆಯಲ್ಲಿ ಹ್ಯಾಮ್ಲೆಟ್‌ಗಳಲ್ಲಿ ರದ್ದುಮಾಡಿದ ಮತ್ತು ಮುಕ್ತಾಯಗೊಳಿಸಿದ ಕಾಮಗಾರಿಗಳ ಬಗ್ಗೆ ಚರ್ಚಿಸಿ ಅಂತಿಮಗೊಳಿಸುವುದು.
- ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಯ ಯೋಜನಾ ಕಿಟ್‌ನಲ್ಲಿ ಲಭ್ಯವಿರುವ ನಮೂನೆಯಲ್ಲಿ ಹಿಂದಿನ ವರ್ಷ 2016–17ಗೆ ಅನುಮೋದಿಸಲ್ಪಟ್ಟ ಬಗ್ಗೆ ಭರ್ತಿಮಾಡಬೇಕು.

ಈ ಬಗ್ಗೆ ಗ್ರಾಮ ಪಂಚಾಯತ್‌ಸರಪಂಚ ಮತ್ತು ಗ್ರಾಮಪ್ರಧಾನ ಇವರಿಂದ ಸಹಿ ಪಡೆಯಬೇಕು.

**ಒಂದು ಬ್ಲಾಕ್‌ಗೆ ಗ್ರಾಮಪಂಚಾಯತಿಯ ಡಾಕ್ಯುಮೆಂಟೇಷನ್ ಮತ್ತು ಬ್ಲಾಕ್‌ನ ಔಪಚಾರಿಕ ಸಂಪರ್ಕ.**

- ಪಂಚಾಯತಿಯ ಎಲ್ಲಾ ಪ್ರತಿನಿಧಿಗಳು ಅಂದರೆ ಗ್ರಾಮ ಪ್ರಧಾನ, SHG ಪ್ರತಿನಿಧಿಗಳು ಗ್ರಾಮ ಪಂಚಾಯತಿ ಕಟ್ಟಡದಲ್ಲೇ ಸಭೆ ನಡೆಸುವುದು.
- ಈ ಸಭೆಯಲ್ಲಿ ಗ್ರಾಮಸಭೆಯ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳಲ್ಲಿ ಚರ್ಚಿಸಬೇಕು.
- ಅನುಮೋದಿಸಲ್ಪಟ್ಟ ಯೋಜನೆಗಳನ್ನು ಗ್ರಾಮಪಂಚಾಯತಿ ಕ್ರೂಢೀಕರಿಸಿ ಪಂಚಾಯತ್ ಸಮಿತಿಯಲ್ಲಿ ನಮೂನೆಗಳ ಮೂಲಕ ಸಿದ್ಧಪಡಿಸಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಒದಗಿಸುವುದು.
- ಗ್ರಾಮಪಂಚಾಯತಿಯು ಒಂದುಪತ್ರವನ್ನು ಬಿಡಿಒ/ಚಾರ್ಜ್ ಅಧಿಕಾರಿಗೆ ಕ್ರೂಢೀಕರಿಸಿ ಕಾರ್ಯಕ್ಕೆ ಗ್ರಾಮಸಭೆಗೆ ಅನು ಮೋದನೆ ಪ್ರತಿ ಸಮೇತ ಪಂಚಾಯತಿಯಲ್ಲಿ ಸಲ್ಲಿಸುವುದು.

**ನಮೂನೆಗಳು: ಗ್ರಾಮಸಭೆಯಲ್ಲಿ ಮಂಡಿಸುವ ಕಾಮಗಾರಿಗಳು**

ಗ್ರಾಮ ಪಂಚಾಯತಿಯ ಹೆಸರು:__________ಗ್ರಾಮದ ಹೆಸರು, __________ವಾರ್ಡ್‌ಸಂಖ್ಯೆ:
ವಾರ್ಡ್/ಕಂದಾಯ ಗ್ರಾಮಸಭೆಯ ದಿನಾಂಕ:__________
ಹಾಜರಿರುವ ಒಟ್ಟು ಸದಸ್ಯರ ಪಟ್ಟಿ:__________ಪುರುಷರು: __________ ಮಹಿಳೆಯರು:__________

**ಸಮುದಾಯ ಕಾಮಗಾರಿಗಳು:**

| ಆದ್ಯತೆ ಸಂಖ್ಯೆ | ಕಾಮಗಾರಿಯ ಮಾದರಿ | ವಿವರ (ಸ್ಥಳ, ಪ್ರಮಾಣ ಇತ್ಯಾದಿ | ನಿರೀಕ್ಷಿತ ಫಲಿತಾಂಶ /ಲಾಭಗಳು | ಸೃಷ್ಟಿಯಾಗುವ ನಿರೀಕ್ಷಿತ ಮಾನವದಿನಗಳು | ಫಲಾನುಭವಿ ದುರ್ಬಲ ವರ್ಗದ ಮನೆಗಳ ಸಂಖ್ಯೆ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

**ಫಲಾನುಭವಿಯ ವೈಯಕ್ತಿಕ ಕಾರ್ಯ:**

| ಆದ್ಯತೆ ಸಂಖ್ಯೆ | ಕಾಮಗಾರಿಯ ಮಾದರಿ | ವಿವರ (ಸ್ಥಳ, ಪ್ರಮಾಣ ಇತ್ಯಾದಿ | ನಿರೀಕ್ಷಿತ ಫಲಿತಾಂಶ /ಲಾಭಗಳು | ಸೃಷ್ಟಿಯಾಗುವ ನಿರೀಕ್ಷಿತ ಮಾನವ ದಿನಗಳು | ಫಲಾನುಭವಿ ದುರ್ಬಲ ವರ್ಗದ ಮನೆಗಳ ಸಂಖ್ಯೆ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

ಪಿಆರ್‌ಐ ಸದಸ್ಯರ ಸಹಿ (ವಾರ್ಡ್/ಗ್ರಾಮಪಂಚಾಯತಿ) ಪಂಚಾಯತ್ ಸೇವಕ GRS ವೀಕ್ಷಕರು

3. **ಗ್ರಾಮೀಣ ಸಚಿವರ ಮಂತ್ರಾಲಯದ ಸಂಕ್ಷಿಪ್ತ ಮಾಹಿತಿ:**

1. NRLM (ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್) ಜೂನ್ 2011ರಲ್ಲಿ ರಾಷ್ಟ್ರೀಯಗ್ರಾಮೀಣ ಜೀವನೋಪಾಯ ಮಿಷನ್ NRLM ಪ್ರಾರಂಭಿಸಲಾಯಿತು.

NRLM ನ ಮೂಲ ಉದ್ದೇಶ ಕನಿಷ್ಠ ಒಬ್ಬ ಮಹಿಳೆಯನ್ನಾದರೂ ಗ್ರಾಮದ ಬಡಕುಟುಂಬಗಳಿಂದ ಆಯ್ಕೆಮಾಡಿ ಸ್ವ ಸಹಾಯ ಗುಂಪಿನವ್ಯಾಪ್ತಿಗೆ ಕರೆಸುವುದು. (Self-help group-SHG). NRLMನ ವೈಶಿಷ್ಟ್ಯಗಳು.

- SHGನ್ನು ಪ್ರಚಾರಮಾಡಲು ಗ್ರಾಮ ಮತ್ತು ಕ್ಲಸ್ಟರ್‌ಹಂತಗಳು–ಗ್ರಾಮ ಹಂತ ಸ್ವಸಹಾಯ ಗುಂಪುಗಳ ಒಕ್ಕೂಟ ಮತ್ತು ಕ್ಲಸ್ಟರ್‌ಗಳ ಒಕ್ಕೂಟ (ಗ್ರಾಮಗಳ ಗುಂಪು):
- ಸತತ ಮತ್ತು ತೀವ್ರ ಸಾಮರ್ಥ್ಯ ಬೆಳೆಸುವುದಕ್ಕೆ ಸ್ವಸಹಾಯ ಗುಂಪಿಗೆ ಮತ್ತು ಸ್ವಸಹಾಯ ಗುಪುಗಳ ಒಕ್ಕೂಟಕ್ಕೆ (VLF/VO) ಮತ್ತು ಕ್ಲಸ್ಟರ್ (ಗ್ರಾಮಗಳ ಗುಂಪು)ಗಳ ಕ್ಲಸ್ಟರ್ ಒಕ್ಕೂಟ (CF) ಮಾಡಲು ಅವಕಾಶವಿದೆ.
- ಪುನರಾವರ್ತನೆಗೊಳ್ಳುವ ನಿಧಿ(RF) ಯನ್ನು ರೂ.10,000ರಿಂದ 15,000 ದರದಲ್ಲಿ ಯೋಗ್ಯ ಸ್ವಸಹಾಯ ಗುಂಪನ್ನು ಬೆಂಬಲಿಸಲು ಅವಕಾಶವಿದೆ.
- ಸಮುದಾಯದ ಬೆಂಬಲ ನಿಧಿ ತೊಡಗಿಸುವ ಅವಕಾಶ(CIF) ಪ್ರತಿ ಸ್ವಸಹಾಯ ಗುಂಪಿಗೆ ರೂ.50,000ರಂತೆ ಇದೆ. ಯೋಗ್ಯ ಕ್ಲಸ್ಟರ್ ಒಕ್ಕೂಟಕ್ಕೆ(CFL)ಇದರಿಂದ VLF ಮತ್ತು SHGsಗಳು ಹಣ ಪಡೆದು, ಹಿಂತಿರುಗಿ ಸುವ ಅವಕಾಶವಿರುತ್ತದೆ.
- ಬ್ಯಾಂಕ್ ಕ್ರೆಡಿಟ್‌ಗೆ ಪ್ರತಿ ಸ್ವಸಹಾಯ ಗುಂಪಿಗೆ ಸಂಪರ್ಕಹೊಂದಿ ಒಟ್ಟು ರೂ. ಒಂದು ಲಕ್ಷ, 5ರಿಂದ 8ವರ್ಷ ಗಳ ಕಾಲ ಸಂಚಿತ ಬ್ಯಾಂಕ್ ಕ್ರೆಡಿಟ್ ತೀವ್ರ ಬೆಂಬಲವಿದೆ.
- ಜಿಲ್ಲೆಗಳಿಂದ ಒಟ್ಟು ಸ್ವಸಹಾಯ ಗುಂಪಿನಿಂದ ಆಯ್ದ 150 ಮಹಿಳೆಯರಿಂದ ನಡೆಸಲ್ಪಡುವ ಸ್ವಸಹಾಯ ಗುಂಪು 7% ಬಡ್ಡಿಗೆ ಗರಿಷ್ಠ ಮೂರುಲಕ್ಷಗಳ ಸಾಲ ಮತ್ತು ಹೆಚ್ಚುವರಿ ಅನುದಾನವನ್ನು ಕಾಲಬದ್ಧವಾಗಿ ಹಿಂತಿ ರುಗಿಸುವವರಿಗೆ ನೀಡುವುದು.
- NRLM ನ 25%ನ್ನು ನೈಪುಣ್ಯ ಅಭಿವೃದ್ಧಿಗಾಗಿ ಮೀಸಲಿಟ್ಟು (ಈಗ ದೀನದಯಾಳ್ ಉಪಾಧ್ಯಾಯ್ ಗ್ರಾಮೀಣ ಕೌಶಲ್ಯ ಯೋಜನಾ (DDU-GKY) ರಿಂದ ಗ್ರಾಮೀಣ ಬಡಜನರು ಕೌಶಲ್ಯ ಬೆಳಸಿಕೊಳ್ಳಲು ಮಾಡಲಾಗಿದೆ.

**2. ಸಂಕ್ಷಿಪ್ತವಾಗಿ NSAP ರಾಷ್ಟ್ರೀಯ ಸಮಾಜಿಕ ಸಹಾಯ ಕಾರ್ಯಕ್ರಮ**

NSAP ಈ ಕೆಳಕಂಡ ಮುಖ್ಯ ಅಂಶಗಳನ್ನು ಹೊಂದಿರುತ್ತದೆ.

> **ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ** (IGNOAPS): ಪಿಂಚಣಿ/ಕೇಂದ್ರದ ಸಹಾಯ BPL ಮನೆಗಳ ವಯೋವೃದ್ಧರಿಗೆ ರೂ.200/ಪ್ರತಿ ತಿಂಗಳು 60–79ವರ್ಷದವರಿಗೆ ಮತ್ತು ರೂ. 500/ಪ್ರತಿ ತಿಂಗಳು 80ವರ್ಷ ಅದಕ್ಕೂ ಮೇಲ್ಪಟ್ಟವರಿಗೆ.

> **ಇಂದಿರಾಗಾಂಧಿ ರಾಷ್ಟ್ರೀಯ ವಿಧವಾವೇತನ** (IGNWPS): ಈ ಪಿಂಚಣಿಯೋಜನೆಯಲ್ಲಿ BPLಮನೆಗಳಲ್ಲಿರುವ ವಿಧವೆಯರಿಗೆ ಪ್ರತಿತಿಂಗಳು ರೂ.300ರಂತೆ 40ರಿಂದ 79 ವರ್ಷದವರಿಗೆ. 80ವರ್ಷ ದಾಟಿದವರಿಗೆ ಇಂದಿರಾ ಗಾಂಧೀ ರಾಷ್ಟ್ರೀಯ ವೃದ್ಧಾಪ್ಯ ವೇತನ (IGNOAPS) ರಂತೆ ರೂ. 500 /ಪ್ರತಿ ತಿಂಗಳು.

> **ಇಂದಿರಾಗಾಂಧೀ ರಾಷ್ಟ್ರೀಯ ಅಂಗವೈಕಲ್ಯರ ವೇತನ:** (IGNDPS):

BPL ಮನೆಗಳಲ್ಲಿರುವ ವಿಧವೆಯರಿಗೆ ಪ್ರತಿ ತಿಂಗಳು ರೂ.300ರಂತೆ 18ರಿಂದ 79 ವರ್ಷದವರಿಗೆ. ತೀವ್ರ ಮತ್ತು ಹೆಚ್ಚುವರಿ ಅಂಗವೈಕಲ್ಯತೆ ಇರುವವರಿಗೆ 80ವರ್ಷ ದಾಟಿದವರಿಗೆ ಇಂದಿರಾಗಾಂಧಿ/ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಮೂಲಕ ತೀವ್ರ ಬಡತನದಲ್ಲಿರುವವರ ಜೀವನ ಮಟ್ಟ ಅಭಿವೃದ್ಧಿ ಪಡಿಸುವ ಅವಕಾಶ

> ಗ್ರಾಮಸ್ಥರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹೇಗೆ ಪ್ರಚಾರಕ್ಕೆಗೊಳ್ಳಬೇಕು

> ಕಂದಾಯ ಗ್ರಾಮ/ಗ್ರಾಮಗಳಲ್ಲಿ ಯೋಜನಾ ಪ್ರಕ್ರಿಯೆ ನಡೆಸಲು ದಿನಾಂಕ ನಿಗದಿಪಡಿಸುವುದು

> BPT ಸದಸ್ಯರು, GRS, SHG ನಾಯಕರು ಕಂದಾಯ ಗ್ರಾಮ/ಗ್ರಾಮ ಹಂತದ ಯೋಜನಾ ಸಮಿತಿಗಳ ಪಾತ್ರ

**3. ಸಂಕ್ಷಿಪ್ತವಾಗಿ DDU-GKY (ಈಗ ದೀನದಯಾಳ್ ಉಪಾಧ್ಯಾಯ್– ಗ್ರಾಮೀಣ ಕೌಶಲ್ಯ ಯೋಜನಾ):**

**DDU-GKYರ ವೈಶಿಷ್ಟ್ಯವೇನು?**

ಬಡತನ ನಿವಾರಿಸುವ ಹಿನ್ನೆಲೆಯಲ್ಲಿ **DDU-GKY** ಗ್ರಾಮೀಣ ಬಡಜನರ ಕೌಶಲ್ಯ ಹೆಚ್ಚಿಸಿ ಸಮರ್ಥಕೆಲಸಗಾರರನ್ನು ಸೃಜಿಸಲು ಸಹಾಯಮಾಡುವುದು. **DDU-GKY** ಇದರ ಮುಖ್ಯ ಅಂಶಗಳು ಈ ಕೆಳಕಂಡಂತಿದೆ.

4. PPP ರೀತಿಯ ಮಾರುಕಟ್ಟೆ ದೃಷ್ಟಿಯ, ಹುದ್ದೆಗೆ ಸಂಬಂಧಿಸಿದಂತೆ ತರಭೇತಿ ಕಾರ್ಯಕ್ರಮ.
5. ಈ ರೀತಿ ತರಭೇತಾದ ಗ್ರಾಮೀಣ ಯುವಕರಲ್ಲಿ 75% ಜನರಿಗೆ ಕಡ್ಡಾಯವಾಗಿ ಹುದ್ದೆ ನೀಡುವುದು.
6. ಗ್ರಾಮೀಣ ಬಡ ಕುಟುಂಬಗಳ 15ರಿಂದ 35ವರ್ಷ ವಯಸ್ಸಿನ ಯುವಕರ ಕಡೆಗೆ ಗಮನ ಹರಿಸುವುದು.
   ಎ) 15 ದಿನಗಳ ಕೆಲಸ ಪೂರೈಸಿದ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣ ಮನೆಯ ಕೆಲಸಗಾರ.
   ಬಿ) RSBY ಮನೆಗಳು.
   ಸಿ) ಅಂತ್ಯೋದಯ ಅನ್ನ ಯೋಜನೆ ಕಾರ್ಡ್ ಮನೆಗಳು
   ಡಿ) BPL-PDSಕಾರ್ಡ್ಮನೆಗಳು.
   ಇ) NRLM-SHG ಮನೆಗಳು.
   ಎಫ್) SECC 2011ರ ಪ್ರಕಾರ ಸ್ವಯಂ ಸೇರ್ಪಡೆಯಾದ ಮನೆಗಳು

- ಕನಿಷ್ಠ ರೂ.6,000/ಪ್ರತಿ ತಿಂಗಳು ಸಂಬಳ(ಮೂರು ತಿಂಗಳ ತರಭೇತಿಯ ನಂತರ)
- ಅಭ್ಯರ್ಥಿಗಳಿಗೆ ಭವಿಷ್ಯದ ಸ್ಥಾನಮಾನ ಪಡೆಯಲು ಬೆಂಬಲ.
- ತರಭೇತಾದ ಪಾಲುದಾರರಿಂದ ಹುದ್ದೆಯಲ್ಲಿ ಉನ್ನತಿಗೆ ಬೆಂಬಲ.
- ವಿದೇಶಿ ಹುದ್ದೆಗೆ ಬೆಂಬಲ ಮತ್ತು ಕ್ಯಾಪ್ಟೀವ್ ಅವಕಾಶ ನೈಪುಣ್ಯವಿರುವ ಯೋಜನೆ ನೀಡುವಲ್ಲಿ ತರಭೇತಾದ ಪಾಲುದಾರರಿಗೆ ಆದ್ಯತೆ.
- ಪ್ರಧಾನಮಂತ್ರಿಗಳ "Make in India" ಪ್ರಚಾರ ಕೈಗಾರಿಕಾತರಭೇತಿನಿಂದ ಕೈಗಾರಿಕೆ ಮತ್ತು **DDU -GKY**ಗಳ ಪಾಲುದಾರಿಕೆಯಿಂದ.

**4. ಇಂದಿರಾ ಆವಾಸ್ ಯೋಜನೆ (IAY) ಸಂಕ್ಷಿಪ್ತವಾಗಿ:**

ಪೀಠಿಕೆ:
ಇಂದಿರಾ ಆವಾಸ್ಯೋಜನೆ ಇದೊಂದು ಬಡಜನರಿಗೆ ಅಂದರೆ ಪಾಳುಬಿದ್ದ ಮನೆಗಳಲ್ಲಿ ವಾಸಿಸುವ ಮಾಡಿರುವ ಸಾರ್ವಜನಿಕ ವಸತಿ ಯೋಜನೆ. ಗ್ರಾಮಸಭೆಗಳಿಂದ ಗುರ್ತಿಸಲ್ಪಟ್ಟ ಸಮುದಾಯದಲ್ಲಿ ಬಡತನದ ರೇಖೆಗಿಂತ ಕೆಳಗಿರುವ (BPL) ಮನೆಗಳು ಸರ್ಕಾರದಿಂದ ತಾಂತ್ರಿಕವಾಗಿ ಮತ್ತು ಆರ್ಥಿಕ ಸಹಾಯ ಪಡೆದು ಮನೆ ಕಟ್ಟಬಹುದು.

**ವೈಶಿಷ್ಟ್ಯಗಳು:**
(i)ಯೋಜನೆಯಿಂದ ಸಹಾಯ: ದಿನಾಂಕ: 1–4–2013 ಸೂರುಕಾಣದ ಬಡತನದ ರೇಖೆಗಿಂತ ಕೆಳಗಿರುವ (BPL) ಮನೆಗಳಿಗೆ ರೂ.70,000 ಸಮತಟ್ಟಾದ ಪ್ರದೇಶಗಳಿಗೆ, ರೂ.75,000 ಬೆಟ್ಟ/ದುರ್ಗಮ ಪ್ರದೇಶಗಳಿಗೆ /IAP ಜಿಲ್ಲೆಗಳಿಗೆ ಕಚ್ಚಾ /ಪಾಳುಬಿದ್ದ ಮನೆಗಳ ಅಭಿವೃದ್ಧಿಗೆ ರೂ.15,000 ಒದಗಿಸಲಾಗಿದೆ. ಹಾಗೂ ಭೂರಹಿತರು ನಿವೇಶನ ಖರೀದಿಸಲು ರೂ.20,000 ನಿಗದಿಯಾಗಿದೆ.

(ii) ಫಲಾನುಭವಿಗಳ ಆಯ್ಕೆ:
ಈ ಯೋಜನೆಯ ಫಲಾನುಭವಿಗಳ ಆಯ್ಕೆ ಗ್ರಾಮಪಂಚಾಯತಿ ವಾರ್ಷಿಕವರಮಾನದ ಮೇಲೆ ಮಾಡುತ್ತದೆ ಇದನ್ನು ಬಡತನದ ರೇಖೆಗಿಂತ ಕೆಳಗಿರುವ (BPL) ಮನೆಗಳ ಶಾಶ್ವತ ಕಾದಿರಿಸುವ ಪಟ್ಟಿಯಿಂದ ಜೇಷ್ಠತೆಮೇಲೆ ತಯಾರಿಸಲಾಗುವುದು. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಪ್ರತ್ಯೇಕವಾಗಿ ಅಂದರೆ ಕಾದಿರಿಸುವ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.
8. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ವಿವಿಧ ರಚನೆಗಳು/ಕಾರ್ಯಗಳ ವಿವರ:
8.1. ಅರಣ್ಯ/ ಮಲೆನಾಡಿನ ಪ್ರದೇಶದಲ್ಲಿ ಸಾಧ್ಯತೆ ಇರುವ ರಚನೆ:

| ಕೆಲಸದ ಹೆಸರು | ವೈಯಕ್ತಿಕ/ಸಮುದಾಯದ ಕೆಲಸ | ಕೆಲಸ ರೀತಿ | ಕೆಲಸದ ಉದ್ದೇಶ | ಕೆಲಸದ ಪ್ರಮಾಣ &ಕೆಲವು ಪರಿಗಣನೆಗಳು | ಅಳತೆ | ಕೆಲಸ ಮತ್ತು ಸಾಮಗ್ರಿ ಪ್ರಮಾಣ | ಕಾರ್ಮಿಕ ದಿನಗಳು /ಅಳತೆ | ಅಳತೆಗೆ ವೆಚ್ಚ(ರೂ) |
|---|---|---|---|---|---|---|---|---|
| ತೂರಾಡುವ ಕಂದಕ(ಇಳಿಜಾರು 10–25% | ಸಮುದಾಯ | ಭೂ ಅಭಿವೃದ್ಧಿ | ಭೂ ಸವಕಳಿ ನಿಯಂತ್ರಿಸಲು ಮತ್ತು ತೇವಾಂಶ ಕಾಪಾಡಲು | ಕಂದಕಗಳ ನಡುವಿನ ಅಂತರ 1ಮೀಟರ್, 0.5 ಮೀಟರ್ ಅಗಲ ಮತ್ತು 0.5ಮೀಟರ್ ಆಳ, 605 ಕಂದಕ ಪ್ರತಿ ಎಕರೆಗೆ | 1 ಎಕರೆ | 90:10 | 373 | 67,190 |
| ಬಾಹ್ಯ ರೇಖೆ ಕಂದಕ<10% | ಸಮುದಾಯ | ಭೂ ಅಬಿ ವೃದ್ಧಿ | | ಸಮಾನಾಂತರ ಕಂದಕಗಳ ನಡುವಿನ ಅಂತರ 3.5 ಅಡಿ ಬಾಹ್ಯ ರೇಖೆಯ, 3.5 ಮೀಟರ್ ಉದ್ದ. ಕಂದಕದ ಆಳ ಮತ್ತು ಅಗಲ 3.5 ಅಡಿ. | 1 ಕಂದಕ | 95:5 | 7.39 | 1,300 |
| ಸಡಿಲ ಕಲ್ಲಿನ ನಿಯಂತ್ರಣ ಡ್ಯಾಂ | ಎರಡು | ಭೂ ಅಭಿ ವೃದ್ಧಿ | ತೀರಾ ಇಳಿಜಾರುಚರಂಡಿ ಲೈನ್: ಮಣ್ಣು ಸವಕಳಿ ನಿಯಂತ್ರಣ, ಗಲ್ಲಿ ನಿರ್ಮಾಣ ಮತ್ತು ಹೂಳು ತೆಗೆಯುವುದು | ಉದ್ದ 10ಮೀಟರ್, ಅಗಲ 0.6 ಮೀಟರ್ (ತಳ) ಮತ್ತು ಎತ್ತರ1 ಮೀಟರ್ | 1 ಎಕರೆ | 40:60 | 129 | 52,000 |
| ಗಲ್ಲಿ ತಡೆಯುವುದು(ಇಳಿಜಾರು> 8% | ಸಮುದಾಯ | ಭೂ ಅಭಿ ವೃದ್ಧಿ | | 60 ಮೀಟರ್ ನಾಲೆಯಲ್ಲಿ ಅಂದಾಜು 3 ರಚನೆ ಪ್ರತಿ ರಚನೆ 2ಮೀಟರ್ ಉದ್ದ, ಮೇಲಿನ ಅಗಲ 0.6 ಮೀಟರ್ ಮತ್ತು ಕೆಳಗೆ 4.6 ಮೀಟರ್ ಮತ್ತು ಎತ್ತರ 1 ಮೀಟರ್ | 3 ರಚನೆಗಳು | 40:60 | 78 | 31,500 |
| ತೂರಾಡುವ ಕಂದಕ (ಇಳಿಜಾರು ಬಾಹ್ಯರೇಖೆ ಕಂದಕ | | | | ಬಾಹ್ಯರೇಖೆ ಕಂದಕ | ಸಡಿಲಕಲ್ಲಿನ ನಿಯಂತ್ರಣ ಡ್ಯಾಂ | | ಗಲ್ಲಿ ತಡೆಯುವುದು | |

8.2ಮೇಲ್ಮಟ್ಟದ ಭೂಮಿಯಲ್ಲಿ ತೋಟಗಳು

| ಕೆಲಸದ ಹೆಸರು | ವೈಯಕ್ತಿಕ/ಸಮುದಾಯದ ಕೆಲಸ | ಕೆಲಸ ರೀತಿ | ಕೆಲಸದ ಉದ್ದೇಶ | ಕೆಲಸದ ಪ್ರಮಾಣ ಮತ್ತು ಕೆಲವು ಪರಿಗಣನೆಗಳು | ಅಳತೆ | ಕೆಲಸ ಮತ್ತು ಸಾಮಗ್ರಿ ಪ್ರಮಾಣ | ಕಾರ್ಮಿಕ ದಿನ ಗಳು / ಅಳತೆ | ಅಳತೆಗೆ ವೆಚ್ಚ(ರೂ) |
|---|---|---|---|---|---|---|---|---|
| ಹಣ್ಣಿನ ಮರದ ತೋಟ | ಸಮುದಾಯ ಮತ್ತು ವೈಯಕ್ತಿಕ | ಭೂ ಅಭಿವೃದ್ಧಿ/ ವೈಯಕ್ತಿಕ ಜಮೀ ನಿನ ಕೆಲಸ | ಒಂದೇ ಬೆಳೆ ಬರುವ ಜಮೀನಿನಲ್ಲಿ ಒಂದೇ ಬೆಳೆ ಬರುವ ವರಮಾನ | ಬೆಳೆಯಿಂದ ಬೆಳೆಗೆ ಅಂತರ 15ಅಡಿ ಅಂಚಿನಲ್ಲಿ ವಿದ್ಯುತ್ ಹಾಯಿಸಿದ ತಂತಿ, ಹಳ್ಳದ ಅಳತೆ 3ಅಡಿ x3ಅಡಿ x3ಅಡಿ | ಹೆಕ್ಟೇರಿಗೆ 400ಗಿಡಗಳು | 51.49 | 235 | 74896(ಮೊದಲ ವರ್ಷಕ್ಕೆ |
| ಮರ ಮತ್ತು ಉರುವಲು ಮರದ ತೋಟ | ಸಮುದಾಯ ಮತ್ತು ವೈಯಕ್ತಿಕ | ಭೂ ಅಭಿವೃದ್ಧಿ /ವೈಯಕ್ತಿಕ ಜಮೀನಿನ ಕೆಲಸ | ಬರಡು ಭೂಮಿಯಲ್ಲಿ ತೋಟ. ವರಮಾನ ಉತ್ಪತ್ತಿ ಮತ್ತು ವಾತಾವರಣ ಕಾಪಾಡುವ ಅಳತೆ | ಬೆಳೆಯಿಂದ ಬೆಳೆಗೆ ಅಂತರ 8ಅಡಿ ಎರಡೂ ಕಡೆ. ಅಂಚಿನಲ್ಲಿ ಬಲವಾದ ವಿದ್ಯುತ್ ಹಾಯಿಸಿದ ತಂತಿ, ಹಳ್ಳದ ಅಳತೆ 2ಅಡಿ x1.5ಅಡಿ | ಎಕರೆಗೆ 640ಗಿಡಗಳು | 62.38 | 147 | 38532(ಮೊದಲ ವರ್ಷಕ್ಕೆ) |

| | | | | | | | | |
|---|---|---|---|---|---|---|---|---|
| | | | | x1.5ಅಡಿ | | | | |
| ರಸ್ತೆ ಬದಿ ತೋಟ | ಸಮುದಾಯ ಮತ್ತು ವೈಯಕ್ತಿಕ | ಭೂ ಅಭಿವೃದ್ಧಿ ಹಣ್ಣಿನಮರ ಗಳ ತೋಟ | ಸೌಂದರ್ಯ ಹೆಚ್ಚಿಸಲು ಮತ್ತು ಸಾಮಾಜಿಕ ಕಾರಣಕ್ಕಾಗಿ ವರ ಮಾನ ಹೆಚ್ಚಿಸಲು | ಪ್ರತಿ ಗಿಡದ ಸುತ್ತಲೂ ಮುಳ್ಳುತಂತಿ (3ಅಡಿ x3ಅಡಿ x5ಅಡಿ ಎತ್ತ ರ) ಹಳ್ಳದ ಅಳತೆ 3 ಅಡಿx 3ಅಡಿ 3ಅಡಿ | ಪ್ರತಿ 1 ಎಕ ರೆಗೆ 200ಗಿಡ ಗಳು | 58:42 | 1,159 | 3,23,600 |
| ಹಣ್ಣಿನ ಮರದ ತೋಟಗಳು | | | ಮರದ ತೋಟಗಳು | | | ರಸ್ತೆ ಬದಿಯ ತೋಟಗಳು | | |

8.3 ಅಂಕುಡೊಂಕಾದ ಬೆಟ್ಟದ ಭೂಮಿಯ ಇತರೆ ಕಾರ್ಯಗಳು

| ಕೆಲಸದ ಹೆಸರು | ವೈಯಕ್ತಿಕ/ಸ ಮುದಾಯ ದ ಕೆಲಸ | ಕೆಲಸ ರೀತಿ | ಕೆಲಸದ ಉದ್ದೇಶ | ಕೆಲಸದ ಪ್ರಮಾಣ ಮತ್ತು ಕೆಲವು ಪರಿಗಣನೆಗಳು | ಅಳ ತೆ | ಕೆಲಸ ಮತ್ತು ಸಾಮಗ್ರಿ ಪ್ರಮಾಣ | ಕಾರ್ಮಿಕ ದಿನಗಳು /ಅಳತೆ | ಅಳತೆಗೆ ವೆಚ್ಚ(ರ ೂ) |
|---|---|---|---|---|---|---|---|---|
| ಕೊಳಚೆ ಚರಂಡಿ | ಎರಡು | ಕಿರು ನೀರಾವರಿ ಕಾರ್ಯ | ಮಳೆ ನೀರು ಕೃಷಿ ಭೂಮಿಗೆ ವ್ಯವ ಸಾಯಕ್ಕಾಗಿತಿರು ಗಿಸುವುದು | ಉದ್ದ 500ಅಡಿ ಮೇಲಿ ನ ಚಾನಲ್, ಅಗಲ 4 ಅಡಿ, ಆಳ 3ಅಡಿ,ತಳದ ಅಗಲ 3 ಅಡಿ | 500 ಅಡಿ | 87:13 | 104 | 19,466 |
| 30 x40 ಮಾದರಿ | ಸಮುದಾ ಯ | ಭೂ ಅಭಿ ವೃದ್ಧಿ | 3–8% ಇಳಿಜಾರಿನ ಮಣ್ಣಿನ ಬದುಗೆ ಸೂಕ್ತ | 30x40ಮಾದರಿ ದೊಡ್ಡ ಜಮೀನಿನಲ್ಲಿ. ಪ್ರದೇಶವ ನ್ನು 30 x40 ಪ್ಲಾಟ್. ಒಂದು ಹಳ್ಳ ಈ ಜಮೀ ನಿಗೆ ಕೆಳಅಂಚಿನಲ್ಲಿ 100 ಸಿಎಫ್.ಟಿ ಪ್ರಮಾಣ ಮತ್ತು ತೋಡಿದ ಮಣ್ಣ ನ್ನು ಬದುಗಳಿಗೆಹರಡಿದೆ | 1 ಹೆಕ್ಟೇ ರ್ | | | |
| | ಎರಡು | ಇತರ | ಗಿಡಗಳು ಮತ್ತು ಬೆಳೆಗಳನ್ನು ದನ ಮೇಯುವುದ ರಿಂದ ಕಾಪಾಡಲು | 5 ಅಡಿ ಮೇಲಿನ ಅಗಲ, 3ಅಡಿ ಆಳ ಮತ್ತು 2 ಅಡಿ ಕೆಳಗಿನ ಅಗಲ | | | | |
| | ಎರಡು | ನೀರುಉಳಿ ಸಿ ನೀರು ಉಪಯೋ ಗಿಸುವುದು | ವ್ಯವಸಾಯಕ್ಕಾಗಿ ಮಳೆ ನೀರು ಸಂಗ್ರ ಹಣೆ | ಸಂಗ್ರಹಣಾ ಪ್ರದೇಶ ನಿರ್ಮಾಣ | | | | |
| | ಎರಡು | | ಮಳೆನೀರಿನ ಕೊಯ್ಲು, ವ್ಯವಸಾ ಯದ ರಕ್ಷಣೆ ಮತ್ತು ಎರಡನೆ ಬೆಳೆ ಮತ್ತು ಮೀನುಗಾರಿಕೆ | 100ಅಡಿ ಉದ್ದ, 100 ಅಡಿ ಅಗಲ, 10ಅಡಿ ಆಳ 1:1 ಇಳಿಜಾರು, ಅಂಚಿನಲ್ಲಿ ಹುಲ್ಲಿನ ಬದು ನಿರ್ಮಿಸುವುದು | 1 ಎಕರೆ ಗೆ | 94:06 | 1592 | 2,73,18 0 |
| ಮಣ್ಣಿನ ಚಾನಲ್ | | | 30 x40ಮಾದರಿ | ದನಗಳನ್ನು ತಡೆಯಲು ಕಂದಕ | | ನೀರು ಸಂಗ್ರಹಣೆ ರಚನೆ | | |

8.4 ವೈಯಕ್ತಿಕ ಜಮೀನಿನ ಕೆಲಸಗಳು

| ಭೂಮಿಯ ವಿಧ | ಕೆಲಸದ ವಿಧ | ಕೆಲಸದ | ಕೆಲಸದ ಪ್ರಮಾಣ ಮತ್ತು | ಅಳತೆ | ಕಾರ್ಮಿಕ | ಕಾಮಿಕ | ಅಳತೆ ವೆಚ್ಚ |
|---|---|---|---|---|---|---|---|

| | | | | | | | |
|---|---|---|---|---|---|---|---|
| | | ಉದ್ದೇಶ | ಇತರ ಪರಿಗಣನೆಗಳು | | ರಿಂದ ಸಾಮಗ್ರಿ ಪ್ರಮಾಣ | ದಿನಗಳು/ಅಳತೆ | (ರೂ) |
| ಮಾಧ್ಯಮ ಅಥವಾ ಕೆಳ ಭೂಮಿ | ತೋಟದ ಕೊಳ | ವರಮಾನ ಹೆಚ್ಚಿಸಲು ವ್ಯವಸಾಯ/ ಮೀನುಗಾರಿಕೆ | 60ಅಡಿ ಉದ್ದ, 10ಅಡಿ ಆಳ ಇಳಿಜಾರು 1:1 ಹುಲ್ಲಿನ ಹೊದಿಕೆ | 1 ಸಂ. | 94:6 | 537 | 93,769 |
| | | | 50 50 10 | 1 ಸಂ. | 93:7 | 349 | 61,200 |
| | | | 40 40 10 | 1 ಸಂ. | 91:9 | 203 | 36,100 |
| | | | 35 35 10 | 1 ಸಂ. | 90:10 | 145 | 26,100 |
| ಮೇಲಿನ/ಊರಿನ ಸಮೀಪದ | ತೋಡಿದ ಬಾವಿ | ವರ್ಷವಿಡೀ ವ್ಯವಸಾಯ | 15ಅಡಿ ವ್ಯಾಸ ಮತ್ತು 35 ಅಡಿ ಆಳ ಭೂಮಿ ಮೇಲೆ 3ಅಡಿ ಎತ್ತರ | 1 ಸಂ. | 87:13 | 96 | 17,780 |
| ಮಧ್ಯಮ ಜಮೀನು | ತೋಟದ ಬದುಗಳು | ಭೂಮಿ ಮತ್ತು ನೀರು ರಕ್ಷಣೆ | ಮೇಲಿನ ಅಗಲ 1.5 ಅಡಿ, ಎತ್ತರ 2ಅಡಿ, ಕೆಳಗಿನ ಅಗಲ 5.5 ಅಡಿ ಇಳಿಜಾರು ಬದು 1:1ಎರಡೂ ಬದಿ | 1 ಸಂ. | 63:37 | 1,135 | 2,91,000 |
| ಮಧ್ಯಮ ಜಮೀನು | ಭೂ ಸಮ ತಟ್ಟಾಗಿ ಮಾಡುವುದು | ಜಮೀನಿನ ಫಲವತ್ತತೆ ಹೆಚ್ಚಿಸಲು ಭೂಮಿ ಮತ್ತು ನೀರು ರಕ್ಷಣೆ | 3%ಗಿಂತ ಕಡಿಮೆ ಇಳಿಜಾರು ಮೇಲಿನ ಅಂಚು ಕತ್ತರಿಸುವುದು ಕೆಳಗಿನ ಭಾಗ ಸಮತಟ್ಟು ಮಾಡ ಲಾಗಿದೆ | 1 ಸಂ. | 90:10 | 55 | 65,000 |

8.5 ಹೈನುಗಾರಿಕೆ ಕುರಿತ ವೈಯಕ್ತಿಕ ಕಾರ್ಯ:

| ಕೆಲಸದ ವಿಧ | ಉದ್ದೇಶ | ಕೆಲಸದ ಪ್ರಮಾಣ ಮತ್ತು ಇತರ ಪರಿಗಣನೆಗಳು | ಅಳತೆ | ಕಾರ್ಮಿಕರಿಂದ ಸಾಮಗ್ರಿಪ್ರಮಾಣ | ಕಾಮಿಕ ದಿನಗಳು /ಅಳತೆ | ಅಳತೆ ವೆಚ್ಚ (ರೂ) |
|---|---|---|---|---|---|---|
| ಕೋಳಿ ಶೆಡ್‌ಗಳು | ಕೋಳಿಗಳ ಮರಣ ಮತ್ತು ಅನಾರೋಗ್ಯ | 12.5ಅಡಿ ಉದ್ದ ಮತ್ತು 8 ಅಡಿ ಅಗಲ (100ಹಕ್ಕಿ ಗಳಿಗೆ) | 1ಸಂ. | 15:85 | 55 | |
| ಮೇಕೆ ಶೆಡ್ | ಮೇಕೆಗಳ ಮರಣ ಮತ್ತು ಅನಾರೋಗ್ಯ | 12.5ಅಡಿ ಉದ್ದ ಮತ್ತು 8 ಅಡಿ ಅಗಲ (10– 12 ಮೇಕೆ ಗಳು) | 1ಸಂ. | 15:85 | 56 | |
| ಹಂದಿಗೂಡು | ಹಂದಿಗಳ ಮರಣ ಮತ್ತು ಅನಾರೋಗ್ಯ | 12.5ಅಡಿಉದ್ದ ಮತ್ತು 8ಅಡಿ (10–12 ಮೇಕೆಗಳು) ಅಗಲ (100 ಹಕ್ಕಿಗಳಿಗೆ) | 1ಸಂ. | 16:84 | 56 | |
| ದನಗಳ ಕೊಟ್ಟಿಗೆಗೆ ಕಾಂಕ್ರೀಟ್ ನೆಲ | ದನಗಳ ಆರೋಗ್ಯಕ್ಕಾಗಿ ಗಂಜಳ ಸಂಗ್ರಹಣೆ | 7.45ಮೀಟರ್ ಉದ್ದ ಮತ್ತು 3.95 ಮೀಟರ್ ಅಗಲ ಗಂಜಳ ಸಂಗ್ರಹಣೆಗೆ ಗುಂಡಿಗೆ ಅವಕಾಶ | 1ಸಂ. | 17:83 | 66 | |